# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

**ಸಂಘದ ಸದಸ್ಯರಾಗಿ**

| | | |
|---|---|---|
| ಮಹಾ ಪೋಷಕರು | – ₹ | 25,000/– |
| ಪೋಷಕರು | – ₹ | 5,000/– |
| ಸದಸ್ಯತ್ವ | – ₹ | 1,000/– |
| ವಾರ್ಷಿಕ ನಿರ್ವಹಣೆ | – ₹ | 500/– |

ಸಂಪುಟ : 13 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಆಗಸ್ಟ್ 2022

E-mail : queries@mmdbs.in magazines@mmdbs.in web : www.mmdbs.in


## ಸರ್ವಸದಸ್ಯರ ಸಭೆಯ ವಿಶೇಷ ಸಂಚಿಕೆ



## ಕಾರ್ಯದರ್ಶಿ ನುಡಿ

ಪ್ರಿಯ ಸದಸ್ಯರೇ ಹಾಗೂ ಗುರುಹಿರಿಯರೇ,

ಈ ವರ್ಷದ ಜುಲೈ ಮೂರನೇ ತಾರೀಖು ಭಾನುವಾರದಂದು 2021–22ನೇ ಸಾಲಿನ ಸರ್ವಸದಸ್ಯರ ಸಭೆಯು ತಮ್ಮೆಲ್ಲರ ಸಹಕಾರದಿಂದ ಯಶಸ್ವಿಯಾಗಿ ನಡೆಯಿತೆಂದು ಭಾವಿಸುತ್ತೇನೆ. ಹಲವು ವರ್ಷಗಳ ನಂತರ 350 ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದು ಸಂತಸ ತಂದಿದೆ. ಈ ಮೂಲಕ, ಸಂಘವು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಭಾವಿಸುತ್ತೇನೆ. ನಿಮ್ಮೆಲ್ಲರ ಪ್ರೋತ್ಸಾಹ, ಸಹಕಾರವನ್ನು ಸ್ಮರಿಸುತ್ತಾ ಇನ್ನೂ ಉತ್ತಮ ಕೆಲಸಗಳನ್ನು ಸಾಧಿಸಲು ಸಾಧ್ಯವೆಂಬ ಆಶಾಭಾವನೆಯಿಂದ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಮುಂಬರುವ ಹಬ್ಬಗಳನ್ನು ಸಂಭ್ರಮ, ಸಡಗರದಿಂದ ಆಚರಿಸಿ ನೀವುಗಳೆಲ್ಲರೂ ಭಗವಂತನ ಕೃಪೆಗೆ ಪಾತ್ರರಾಗಲೆಂದು ಪ್ರಾರ್ಥಿಸುತ್ತೇನೆ.

ಮುಂದೆ ನಮ್ಮ ಸಮುದಾಯದಲ್ಲಿ ಐವತ್ತು ವರ್ಷಗಳ ದಾಂಪತ್ಯ ಜೀವನವನ್ನು ಪೂರೈಸಿರುವ ದಂಪತಿಗಳನ್ನು ಹಾಗೂ ವೈದ್ಯರನ್ನು ಅಭಿನಂದನಾ ಪೂರ್ವಕವಾಗಿ ಸನ್ಮಾನಿಸುವ ವಿಷಯವನ್ನು ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸುವ ಉದ್ದೇಶವಿದೆ.

ಕಳೆದ ಎರಡು ವರ್ಷಗಳಿಂದ ಸಾಧ್ಯವಾಗದಿದ್ದ ಒಂದು ದಿನದ ಪ್ರವಾಸವು ಈ ವರ್ಷ ಆಯೋಜಿಸುವ ಪ್ರಯತ್ನ ನಡೆಯುತ್ತಿದೆ.

ನಮ್ಮನ್ನು ಅಗಲಿದ ಸಮುದಾಯದ ಎಲ್ಲ ಪ್ರೀತಿಪಾತ್ರರಿಗೆ ಸದ್ಗತಿ ಪ್ರಾಪ್ತವಾಗಲಿ ಹಾಗೂ ಎಲ್ಲ ಕುಟುಂಬದವರಿಗೂ ಭಗವಂತ ಆಯುರಾರೋಗ್ಯ ನೆಮ್ಮದಿ, ಶಾಂತಿ ನೀಡಲಿ ಎಂಬ ಪ್ರಾರ್ಥನೆಯೊಂದಿಗೆ.

ನಮಸ್ಕಾರಗಳು.



ಎಸ್.ಸಿ. ಶ್ರೀನಿವಾಸ
ಕಾರ್ಯದರ್ಶಿ

## ಸಂಪಾದಕೀಯ

ಸಮುದಾಯದ ಆತ್ಮೀಯ ಬಂಧುಗಳೆ,



ಬೃಹಚ್ಚರಣ ಪತ್ರಿಕೆಗೆ ಕನ್ನಡ ಭಾಷೆಯಲ್ಲಿ ಸ್ವಯಂ ಲೇಖನಗಳನ್ನು ಆಹ್ವಾನಿಸಲಾಗಿದೆ. ಲೇಖನಗಳು ಸಾಹಿತ್ಯ, ಅಧ್ಯಾತ್ಮ, ಹಬ್ಬದ ವಿಶೇಷಗಳು, ಪ್ರವಾಸ ಕಥನಗಳು, ಪುಸ್ತಕ ಬಿಡುಗಡೆ, ಕವನ, ಚುಟುಕಗಳು, ಚಿತ್ರಕಲೆ, ರಂಗೋಲಿ, ಕಸೂತಿ, ಸಂಗೀತ, ನೃತ್ಯ, ಕ್ರೀಡೆ, ವಿಜ್ಞಾನ, ಚರಿತ್ರೆ, ದೇಶಭಕ್ತಿ ಮತ್ತು ಇನ್ನಿತರ ಸಂಬಂಧಿತವಾಗಿರಬೇಕು.

– ಆರ್. ರಮೇಶ್, ಸಂಪಾದಕರು

## ಅಧ್ಯಕ್ಷರ ನುಡಿ

ಬಂಧುಮಿತ್ರರೇ,
ನೀವುಗಳು ಕ್ಷೇಮವೆಂದು ನಂಬುತ್ತೇನೆ.

ಹಬ್ಬಗಳ ಸಾಲನ್ನು ತರುವ ಶ್ರಾವಣ ಮಾಸವು ಅಡಿಯಿರಿಸಿರುವ ಈ ಸಂದರ್ಭದಲ್ಲಿ ಬೃಹಚ್ಚರಣ ಬಂಧುಮಿತ್ರರಿಗೆ ಶುಭ ಆಶಯಗಳು!

ಈ ವರ್ಷದ ಎರಡನೆಯ ಸಂಚಿಕೆ ನಿಮ್ಮ ಕೈ ಸೇರಿದೆ. ಶ್ರೀ ಶಂಕರಜಯಂತಿ ಹಾಗೂ ಸರ್ವಸದಸ್ಯರ ಸಭೆಯ ಬಗೆಗಿನ ವರದಿಗಳು ನಿಮಗೆ ಮೆಚ್ಚುಗೆಯಾಗುತ್ತದೆಂದು ನಂಬಿದ್ದೇನೆ.

ಈ ವರ್ಷದ ಜುಲೈ ತಿಂಗಳ ಮೂರರಂದು ಜರುಗಿದ ವಾರ್ಷಿಕ ಸರ್ವಸದಸ್ಯರ ಸಭೆಗೆ ಸದಸ್ಯರ ಹಾಜರಾತಿ ಉತ್ತೇಜನಕಾರಿಯಾಗಿದ್ದಿತು. ಎರಡು ವರ್ಷಗಳ ನಂತರ ಮೊದಲ ಬಾರಿ ಅಂದು ನಡೆಸಲಾದ ಹಿರಿಯ ಚೇತನರಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳಲ್ಲಿ ಸದಸ್ಯರು ಮತ್ತು ಅವರ ಪರಿವಾರ ವರ್ಗದವರು ಸಂತಸ, ಉತ್ಸಾಹಗಳಿಂದ ಪಾಲ್ಗೊಂಡದ್ದು ಎದ್ದುಕಾಣುವಂತಿದ್ದಿತು.

ಸಂಘದ ನೋಂದಣಿಯು 2023ರ ಮಾರ್ಚ್ ತಿಂಗಳಿನವರೆಗೂ ಇಷ್ಟರಲ್ಲಿಯೇ ನವೀಕರಣಗೊಳ್ಳಲಿದೆ.

2021 ಅಕ್ಟೋಬರ್ ತಿಂಗಳು ನಡೆದ ಸರ್ವಸದಸ್ಯರ ಸಭೆಯಲ್ಲಿ ಅನುಮೋದಿಸಲ್ಪಟ್ಟ ಬೈಲಾ ತಿದ್ದುಪಡಿಗಳಿಗೆ Registrar of Societies ಅವರಿಂದ ಒಪ್ಪಿಗೆ ದೊರಕಿದೆ.

ಈ ವರ್ಷದೊಳಗೆ ಒಂದೆರಡು ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗುವುದೆಂದು ಆಶಿಸುತ್ತೇನೆ.

ಎಲ್ಲರಿಗೂ ಒಳ್ಳೆಯದಾಗಲಿ!



ಬಿ. ಸುಬ್ರಹ್ಮಣ್ಯಂ
ಅಧ್ಯಕ್ಷರು

## ಅಭಿನಂದನೆಗಳು



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಶ್ರೀ ಅಶೋಕ್ ಹಾರನಹಳ್ಳಿರವರನ್ನು ದಿನಾಂಕ 3.6.2022 ಶುಕ್ರವಾರದಂದು ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಭೇಟಿ ಮಾಡಿ ಅವರನ್ನು ಸಂಘದ ಪರವಾಗಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಂಘದ ಚಟುವಟಿಕೆಗಳ ಸಂಕ್ಷಿಪ್ತ ವಿವರಣೆಯ ಪತ್ರ ಹಾಗೂ ಹಿಂದಿನ ಎರಡು "ಬೃಹಚ್ಚರಣ" ಪತ್ರಿಕೆಯ ಸಂಚಿಕೆಗಳನ್ನು ಶ್ರೀಯುತರಿಗೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಯುತರು ಮಹಾಸಭಾದ ವಿಪ್ರನುಡಿಯ ಪ್ರತಿ ಸಂಚಿಕೆಯನ್ನು ಸಂಘಕ್ಕೆ ಕಳುಹಿಸಬೇಕೆಂದು ಕಛೇರಿಯ ಸಿಬ್ಬಂದಿಗೆ ನಿರ್ದೇಶಿಸಿದರು.

ಅದಲ್ಲದೆ ಮಹತ್ವದ ಮತ್ತು ಸಂತಸದ ಸುದ್ದಿಯೇನೆಂದರೆ "ಗಾಯತ್ರಿ ಭವನ"ದ ಮೂರನೆಯ ಮಹಡಿಯಲ್ಲಿ ಪ್ರತಿ ತಿಂಗಳು ನಮ್ಮ ಸಂಘದ ಕಾರ್ಯಕಾರಿ ಸಮಿತಿಯ ಸಭೆಯನ್ನು ಕೈಗೊಳ್ಳುವುದಕ್ಕೆ ಸ್ಥಳಾವಕಾಶ ಒದಗಿಸುವುದಾಗಿ ತಿಳಿಸಿದರು.

ಸಂಘವು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಲು ಸಂತೋಷಿಸುತ್ತದೆ.

# ಸಂಘಕ್ಕೆ ಉದಾರ ದೇಣಿಗೆ ನೀಡಿದ ಸದಸ್ಯರು/ದಾನಿಗಳು ಮತ್ತು ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಸದಸ್ಯರು

ಛಾಯಾಚಿತ್ರಗಳು : ಕೆ.ಸಿ. ನಟರಾಜನ್ & ಅರ್ಜುನ್ ದೇಶಪಾಂಡೆ



ಶ್ರೀಮತಿ ಕೆ. ಅಂಜನಿ



ಶ್ರೀಮತಿ ಅನುರಾಧ ಮತ್ತು ಶ್ರೀ ಶ್ರೀಹರಿ ಉಡುಪ



ಶ್ರೀಮತಿ ವೈಜಯಂತಿ



ಶ್ರೀಮತಿ ಸುಲೋಚನ ಆರ್ ರಾವ್ ಮತ್ತು ಶ್ರೀ ಆರ್.ಎಸ್.ರಾವ್



ಶ್ರೀಮತಿ ಸೀತಾಲಕ್ಷ್ಮೀ ಮತ್ತು ಶ್ರೀ ಅಟ್ಟೂರು ರಾಮಕೃಷ್ಣ ಶರ್ಮ



ಶ್ರೀಮತಿ ಗಾಯತ್ರಿ ಮತ್ತು ಶ್ರೀ ವಿ. ಛಾಯಪತಿ. ಶ್ರೀಯುತರು
ಸ್ನಾತಕ ಮತ್ತು ಸ್ನಾತಕೋತ್ತರ ಪ್ರತಿಭಾವಂತರನ್ನು ಪುರಸ್ಕರಿಸಿದರು



ಶ್ರೀಮತಿ ಇಂದಿರಾ ಮತ್ತು ಶ್ರೀ ಬಿ.ಎನ್.ಗೋವಿಂದ ಪ್ರಸಾದ್



ಶ್ರೀಮತಿ ಜಯಶ್ರೀ ಮತ್ತು ಶ್ರೀ ಎಸ್.ಸೋಮಸುಂದರ



ಶ್ರೀ ವಿ.ಎಸ್.ಮಣಿ



ಶ್ರೀಮತಿ ಸರಸ್ವತೀ ನಟರಾಜನ್ ಮತ್ತು ಶ್ರೀ ಕೆ.ಸಿ.ನಟರಾಜನ್



ಶ್ರೀ ಬಿ.ಎಸ್. ಸೂರ್ಯನಾರಾಯಣ. ಶ್ರೀಯುತರು
10ನೇ ಮತ್ತು ಪಿ.ಯೂ.ಸಿ. ಪ್ರತಿಭಾವಂತರನ್ನು ಪುರಸ್ಕರಿಸಿದರು



ಶ್ರೀಮತಿ ಲಲಿತಾ ಮತ್ತು ಶ್ರೀ ಆರ್.ರಮೇಶ್

**ಮೈ.ಮಂ.ದ್ರಾ. ಬೃಹಚ್ಚರಣ ಸಂಘ**

**(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)**

**ನೂತನ ಕಾರ್ಯಕಾರಿ ಸಮಿತಿ**

**ಶ್ರೀಯುತರುಗಳಾದ**

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿ

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹಖಜಾಂಚಿ

**ಆರ್. ಗಣೇಶ್ ಶ್ರೀಧರ್, 9880187686**
ಆಂತರಿಕ ಲೆಕ್ಕ ಪರಿಶೋಧಕರು

**ಸದಸ್ಯರು**

**ಜಿ.ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಸರಸ್ವತೀ ನಟರಾಜನ್, 9480619730**
**ನಾಗೇಶ, 9980662118**
**ಕೆ.ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್.ಎ. ಶ್ಯಾಮಸುಂದರ್, 9845205674**
**ಆರ್. ರಮೇಶ್, 9886034048**
**ಲಲಿತಾ ರಮೇಶ್, 9945199637**
**ಬಿ.ಆರ್. ಅನಿಲ್ ರಮೇಶ್, 9980027189**
**ಬಿ.ಸಿ. ನಟರಾಜ, 9980183181**

ಲೆಕ್ಕಪರಿಶೋಧಕರು

**ಬಿ.ಎನ್. ಗೋವಿಂದ್ ಪ್ರಸಾದ್, 9845128229**

**'ಬೃಹಚ್ಚರಣ' ಪತ್ರಿಕೆಯ ಸಂಪಾದಕ ಮಂಡಳಿ**

ಸಂಘದ **ಅಧ್ಯಕ್ಷರು ಹಾಗೂ ಕಾರ್ಯದರ್ಶಿ**

**ಆರ್. ರಮೇಶ್, 9886034048**
ಸಂಪಾದಕರು

**ಲಲಿತಾ ರಮೇಶ್, 9945199637**
ಸದಸ್ಯರು

**ಬಿ.ಆರ್. ಅನಿಲ್ ರಮೇಶ್, 9980027189**
ಸದಸ್ಯರು

**ಎನ್. ಶಿವಕುಮಾರ್, 9886505505**
ಛಾಯಾಗ್ರಾಹಕರು

## ಶ್ರೀ ನಾಗೇಶ್ವರ ಕ್ಷೇತ್ರದ ನಾಗರಕಟ್ಟೆ ಸುರಕ್ಷಣಾ ತಡೆ

ಕಿತ್ತಿಗಾನಹಳ್ಳಿಯ ನಾಗಾರಾಧನೆಯ ಸಂದರ್ಭದಲ್ಲಿ ಶ್ರೀ ನಾಗೇಶ್ವರ ಕ್ಷೇತ್ರದ ಅಶ್ವತ್ಥಕಟ್ಟೆಯ ಸುತ್ತಲೂ ಖಾಯಂ ಆಗಿ ಸುರಕ್ಷಣಾ ತಡೆಯನ್ನು ನಿರ್ಮಿಸಬೇಕೆಂದು ಸದಸ್ಯರು ಸಂಘದ ಕಾರ್ಯಕಾರಿ ಸಮಿತಿಗೆ ಸಲಹೆ ನೀಡಿದ್ದರು. ಇದಕ್ಕನುಗುಣವಾಗಿ ದಿನಾಂಕ 13.3.2022ರಂದು ನಡೆದ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಂಘದ ಸದಸ್ಯರ ಈ ಸಲಹೆಯನ್ನು ಚರ್ಚಿಸಿ ಭಕ್ತಾದಿಗಳ ಹಿತದೃಷ್ಟಿಯಿಂದ ಕಾರ್ಯಗತ ಗೊಳಿಸಬೇಕೆಂದು ನಿರ್ಧರಿಸಲಾಯಿತು.

ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಖಜಾಂಚಿಗಳು ದಿನಾಂಕ 26.3.2022ರಂದು ಶ್ರೀನಾಗೇಶ್ವರ ಕ್ಷೇತ್ರಕ್ಕೆ ಭೇಟಿ ನೀಡಿ ಕ್ಷೇತ್ರದ ಪ್ರಧಾನ ಅರ್ಚಕರಾದ ಶ್ರೀ ಸೂರ್ಯನಾರಾಯಣ ದೀಕ್ಷಿತರೊಡನೆ ಈ ಸುರಕ್ಷಣಾ ತಡೆಯ ನಿರ್ಮಾಣದ ವಿವರಗಳನ್ನು ಚರ್ಚಿಸಿ ಈ ಕಾಮಗಾರಿಯನ್ನು ಎರಡು ತಿಂಗಳಲ್ಲಿ ಪೂರೈಸಲು ನಿರ್ಧರಿಸಿದ್ದರು.

ಈ ಸುರಕ್ಷಣಾ ತಡೆಯ ನಿರ್ಮಾಣಕ್ಕೆ ಸಂಘದ ವಿನಂತಿಗೆ ನಮ್ಮ ಸದಸ್ಯರು ಸಕಾರಾತ್ಮಕವಾಗಿ ಸ್ಪಂದಿಸಿ ಉದಾರ ಕೊಡುಗೆಯನ್ನು ನೀಡಿದ್ದಾರೆ. ಸಂಘದ ಕಾರ್ಯಕಾರಿ ಸಮಿತಿಯವರೆಲ್ಲರೂ ನಾವು ಕೈಗೊಳ್ಳುವ ಎಲ್ಲಾ ಕಾರ್ಯಗಳಿಗೂ ಸದಸ್ಯರು ಈ ರೀತಿ ಸಹಾಯಹಸ್ತ ನೀಡುತ್ತಿರುವುದಕ್ಕೆ ಅತ್ಯಂತ ಹರ್ಷವನ್ನು ವ್ಯಕ್ತಪಡಿಸಿದ್ದಾರೆ.

ಈ ಕಾರ್ಯವು ನಿರ್ಧಾರಿತ ಅವಧಿಯಲ್ಲಿ ಮತ್ತು ಸುಸೂತ್ರವಾಗಿ ನಡೆಯಲು ನಮ್ಮವರೇ ಆದ ಖಜಾಂಚಿ ಶ್ರೀ ಎಸ್.ಸತ್ಯನಾರಾಯಣರವರು ಹೆಚ್ಚು ಶ್ರಮವಹಿಸಿದ್ದಾರೆ. ಅಲ್ಲದೆ ಹಿಂದಿನ ಕಾರ್ಯದರ್ಶಿ ಶ್ರೀ ವಿ.ಎಸ್.ಮಣಿರವರು ಈ ಕಾರ್ಯವು ಸಂಪೂರ್ಣಗೊಳ್ಳಲು ಕಾಲಕಾಲಕ್ಕೆ ಉತ್ತಮ ಸಲಹೆಗಳನ್ನು ನೀಡಿ ಸಹಕರಿಸಿದ್ದಾರೆ.

ಮತ್ತೊಮ್ಮೆ ಸ್ವಯಂ ಪ್ರೇರಿತರಾಗಿ ದೇಣಿಗೆ ನೀಡಿದ ಎಲ್ಲಾ ಸದಸ್ಯರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳು.





# ಸರ್ವ ಸದಸ್ಯರ ಸಭೆ - 2021-22

ಸಂಘದ 2021–22ರ ವಾರ್ಷಿಕ ಸರ್ವ ಸದಸ್ಯರ ಸಭೆ ಭಾನುವಾರ, ದಿನಾಂಕ 3.7.2022ರಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಮಂಗಳ ಸದನದಲ್ಲಿ ನಡೆಯಿತು. ಬೆಳಿಗ್ಗೆ 11.00ಕ್ಕೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್.ಅರುಣ್‌ರವರ ನಿರೂಪಣೆಯೊಡನೆ ಕಾರ್ಯಕ್ರಮ ಪ್ರಾರಂಭವಾಯಿತು.

ಸಂಘದ ಹಿರಿಯ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ. ಗುಂಡಪ್ಪನವರ ಮೊಮ್ಮಗಳು ಹಾಗೂ ಸದಸ್ಯ ಮತ್ತು ಖಂಜಿರ ವಿದ್ವಾನ್ ಶ್ರೀ ಗುರು ಪ್ರಸನ್ನರವರ ಪುತ್ರಿ ಕುಮಾರಿ ಮಾಳವಿಯ ಶಾರದಾದೇವಿಯ ಪ್ರಾರ್ಥನೆಯು ಕಾರ್ಯಕ್ರಮಕ್ಕೆ ನಾಂದಿಯಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಬಿ.ಸುಬ್ರಹ್ಮಣ್ಯಂರವರು ನೆನಪಿನ ಕಾಣಿಕೆ ನೀಡಿ ಕುಮಾರಿ ಮಾಳವಿಗೆ ಶುಭ ಕೋರಿ ಉಜ್ವಲ ಭವಿಷ್ಯಕ್ಕೆ ಹಾರೈಸಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆರ್.ಎ. ಶ್ಯಾಮಸುಂದರ್‌ರವರು ಕಳೆದ ಅಕ್ಟೋಬರ್‌ನಿಂದ ನಮ್ಮನ್ನಗಲಿದ ನಮ್ಮ ಸಮುದಾಯದವರ ಹೆಸರುಗಳನ್ನು ಓದಿದರು. ನಂತರ ಅಗಲಿದವರಿಗೆ ಸಭೆಯಲ್ಲಿ ಒಂದು ನಿಮಿಷದ ಮೌನ ಆಚರಿಸಿ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಂಘದ ಅಧ್ಯಕ್ಷರು ನೆರೆದ ಸಭಿಕರನ್ನು ಸ್ವಾಗತಿಸಿ, ಹಿರಿಯ ಚೇತನರನ್ನು ಮತ್ತು ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸುವ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದ ಈ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು.

ಸಂಘದ ಕಾರ್ಯದರ್ಶಿ ಶ್ರೀ ಎಸ್.ಸಿ. ಶ್ರೀನಿವಾಸರವರು ಹಿಂದಿನ ವರ್ಷದಲ್ಲಿ ಸಂಘವು ಕೈಗೊಂಡ ಕಾರ್ಯಕ್ರಮ, ಸಮಾರಂಭಗಳ ವಿವರ ತಿಳಿಸಿದರು. ಕಿತ್ತಿಗಾನಹಳ್ಳಿಯಲ್ಲಿ ನಡೆದ ನಾಗಾರಾಧನೆ, ಸದಸ್ಯರ ಕೈಪಿಡಿ ಬಿಡುಗಡೆ, ವೆಬ್ ಸೈಟ್ ಉದ್ಘಾಟನೆ, ಶಂಕರ ಜಯಂತಿ, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ "ಗಾಯತ್ರಿ ಭವನ"ಕ್ಕೆ ನೂರು ಕುರ್ಚಿಗಳ ಕೊಡುಗೆ, ಮತ್ತು ಕಿತ್ತಿಗಾನಹಳ್ಳಿ ಅಶ್ವತ್ಥಕಟ್ಟೆ ಸುತ್ತ ಸುರಕ್ಷಣಾ ತಡೆ ನಿರ್ಮಾಣಗಳ ವರದಿಯನ್ನು ಸಭೆಗೆ ತಿಳಿಸಿದರು. ಈ ಸಂದರ್ಭದಲ್ಲಿ ನಮ್ಮ ಸಂಘಕ್ಕೆ ಸ್ವಇಚ್ಛೆಯಿಂದ ಉದಾರವಾಗಿ ದೇಣಿಗೆ ನೀಡಿದ ಸದಸ್ಯರು ಮತ್ತು ಹಿತೈಷಿಗಳನ್ನು ಸ್ಮರಿಸಿ ಅವರಿಗೆ ಧನ್ಯವಾದ ಅರ್ಪಿಸಿದರು.

ಸಂಘದ ಖಜಾಂಚಿಗಳಾದ ಶ್ರೀ ಎಸ್.ಸತ್ಯನಾರಾಯಣರವರು ಆಯ–ವ್ಯಯ ಪತ್ರವನ್ನು ಮಂಡಿಸಿದರು. ಈ ಮೊದಲೇ ಸದಸ್ಯರಿಗೆ ಆಯ–ವ್ಯಯ ಪತ್ರವನ್ನು ಅಂಚೆಯ ಮೂಲಕ ತಲುಪಿಸಲಾಗಿತ್ತು. ಸದಸ್ಯರು ಕೈ ಎತ್ತುವ ಮೂಲಕ ಅದನ್ನು ಅನುಮೋದಿಸಿದರು.

ಅಧ್ಯಕ್ಷರಾದ ಶ್ರೀ ಬಿ. ಸುಬ್ರಹ್ಮಣ್ಯಂರವರು ತಮ್ಮ ಅಧ್ಯಕ್ಷರ ನುಡಿಯಲ್ಲಿ ಸದಸ್ಯರಾದ ಶ್ರೀ ಬಿ.ಸಿ. ನಟರಾಜರವರನ್ನು ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಸ್ವೀಕರಿಸಲು ಸಭೆಯ ಒಪ್ಪಿಗೆಯನ್ನು ಕೋರಿದರು. ಸದಸ್ಯರು ಪೂರ್ಣಸಮ್ಮತಿ ಸೂಚಿಸಿದರು. ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನ ಮಾಡಬೇಕಾದ ಮುಂದಿನ ಯೋಜನೆಗಳನ್ನು ಪ್ರಚುರ ಪಡಿಸಿದರು. ಸಂಘಕ್ಕೆ ಸದಸ್ಯರ ಸಂಖ್ಯೆ ಹೆಚ್ಚಾಗಬೇಕೆಂದು ಬಯಸಿ ಈ ಹಿಂದೆ ಪ್ರತಿಭಾ ಪುರಸ್ಕಾರ ಪಡೆದ ಯುವ ಪೀಳಿಗೆಯನ್ನು ಸದಸ್ಯರಾಗಲು ಕೋರಿದರು. ಕೊನೆಯಲ್ಲಿ ಅಧ್ಯಕ್ಷರು ಸದಸ್ಯರ ಅಭಿಪ್ರಾಯ, ಅನಿಸಿಕೆ ಮತ್ತು ಸಲಹೆಗಳನ್ನು ಆಹ್ವಾನಿಸಿದರು.

ಸಂಘದ ಮಹಾಪೋಷಕಿ ಶ್ರೀಮತಿ ಕೆ.ಅಂಜನಿರವರು ಸಂಘದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು. ಸದಸ್ಯ ಶ್ರೀ ಬಾಲಸುಬ್ರಹ್ಮಣ್ಯರವರು ಮತ್ತು ಶ್ರೀ ವೆಂಕಟಸುಬ್ಬಯ್ಯನವರು ಪರಿಸರದ ಮೇಲಿನ ಕಾಳಜಿಯಿಂದ ಕಾಗದ ಬಳಕೆ ಕಡಿಮೆ ಮಾಡಿ "ಬೃಹಚ್ಚರಣ" ಪತ್ರಿಕೆಯನ್ನು ವಿದ್ಯುನ್ಮಾನದ (soft copy) ಮೂಲಕ ಕಳುಹಿಸಬಹುದೆಂದರು. ಡಿಜಿಟಲ್ ಯುಗವಾದ್ದರಿಂದ ಸಂಘದ ವಿಷಯಗಳನ್ನು ವಾಟ್ಸ್ ಅಪ್ ಮತ್ತು ಈಮೈಲ್ ಮೂಲಕ ಕಳುಹಿಸಬಹುದೆಂದು ಸೂಚಿಸಿದರು. ಇದಕ್ಕೆ ಅಧ್ಯಕ್ಷರು ಈ ಕಾರ್ಯವನ್ನು ಥಟ್ಟನೆ ಮಾಡುವುದು ಕಷ್ಟ, ನಿಧಾನವಾಗಿ ಇದನ್ನು ಕಾರ್ಯಗತ ಮಾಡುವ ಪಥದಲ್ಲಿರುವುದಾಗಿ ತಿಳಿಸಿದರು. ಹಿರಿಯ ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿರವರು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ದೇವಸ್ಥಾನದ ಕೈಂಕರ್ಯಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯದರ್ಶಿಗಳು ವಿದ್ಯಾನಿಧಿಗಾಗಿ ಉದಾರ ದೇಣಿಗೆ ನೀಡಿದ ಸಮುದಾಯದವರು ಮತ್ತು ದಾನಿಗಳ ಹೆಸರುಗಳನ್ನು ತಿಳಿಸಿ ಅವರುಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಕಾರ್ಯಕ್ರಮದ ಪ್ರಮುಖ ಅಂಗವಾಗಿ 75 ವರ್ಷ ಪೂರ್ಣಗೊಳಿಸಿದ ಸಮುದಾಯದ ಹಿರಿಯರಿಗೆ (ಕೆಲವು ಹಿರಿಯರಿಗೆ ದಂಪತಿ ಸಮೇತ) ಗೌರವಪೂರ್ಣ ಸನ್ಮಾನ ಮಾಡಲಾಯಿತು. ಸಂಘದ ಹಿರಿಯ ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಸರಸ್ವತೀ ನಟರಾಜನ್, ಶ್ರೀ ಕೆ. ಗುಂಡಪ್ಪ, ಶ್ರೀ ಎಸ್. ಸತ್ಯನಾರಾಯಣ್‌ರವರು ಹಿರಿಯ ಚೇತನರಿಗೆ ಶಾಲು, ಹಾರ, ಫಲ ಮತ್ತು ದೀಪಗಳನ್ನು ನೀಡುವ ಮೂಲಕ ಗೌರವ ಸೂಚಿಸಿದರು.



ಸಮುದಾಯದ ಹತ್ತನೇ ತರಗತಿ, ಪಿ.ಯೂ.ಸಿ., ಪದವಿ, ಸ್ನಾತಕೋತ್ತರ ಮತ್ತು ಸಂಗೀತ ಕ್ಷೇತ್ರದಲ್ಲಿ ಉತ್ತಮ ದರ್ಜೆಗಳನ್ನು ಪಡೆದ ವಿದ್ಯಾರ್ಥಿ ಪ್ರತಿಭಾವಂತರನ್ನು ಪುರಸ್ಕರಿಸಲಾಯಿತು. ಅವರಿಗೆ ಪ್ರಮಾಣ ಪತ್ರ, ಸಪ್ನಾ ಬುಕ್ ಹೌಸ್‌ನಿಂದ ಉಡುಗೊರೆ ಕಾರ್ಡ್‌ಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು. ವಿದ್ಯಾರ್ಥಿಗಳನ್ನು ಶಿಕ್ಷಣ ಕ್ಷೇತ್ರದ ಸಮುದಾಯದ ಹಿರಿಯರಾದ ಶ್ರೀ ಬಿ.ಎಸ್. ಸೂರ್ಯನಾರಾಯಣ ಮತ್ತು ಶ್ರೀ ವಿ. ಛಾಯಾಪತಿ ಹಾಗೂ ಸಂಗೀತ ಕ್ಷೇತ್ರದ ಘಟವಿದ್ವಾನ್ ಶ್ರೀ ಆರ್.ಪಿ. ರವಿಶಂಕರ್ ಪುರಸ್ಕರಿಸಿ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಿತವಚನಗಳನ್ನು ನೀಡಿದರು. ಸಂಘವು ಧನ್ಯತಾಪೂರ್ವಕವಾಗಿ ಈ ಮಹನೀಯರನ್ನು ದಂಪತಿ ಸಮೇತ ಸನ್ಮಾನಿಸಿತು.

ಹಿರಿಯ ಚೇತನರ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್.ಕೆ. ಶಶಿಧರ್‌ರವರು ನಿರೂಪಿಸಿದರು.

ಸಂಘಕ್ಕೆ ನಿರಂತರವಾಗಿ ಪ್ರೋತ್ಸಾಹಿಸಿ ಉತ್ತೇಜನ ನೀಡುತ್ತಿರುವ ಶ್ರೀಮತಿ ಕೆ. ಅಂಜನಿ, ಶ್ರೀಮತಿ ಎಸ್. ಜಯಶ್ರೀ ಮತ್ತು ಎಸ್. ಸೋಮಸುಂದರ, ಶ್ರೀ ವಿ.ಎಸ್. ಮಣಿ, ಶ್ರೀ ಎಸ್. ಶ್ರೀನಿವಾಸಯ್ಯ, ಶ್ರೀಮತಿ ಸುಲೋಚನ ರಾವ್ ಮತ್ತು ಶ್ರೀ ಆರ್.ಎಸ್. ರಾವ್, ಶ್ರೀಮತಿ ಸೀತಾಲಕ್ಷ್ಮೀ ಮತ್ತು ಶ್ರೀ ಅಟ್ಟೂರು ರಾಮಕೃಷ್ಣಶರ್ಮ, ಶ್ರೀಮತಿ ಸರೋಜ ಲಕ್ಷ್ಮೀನಾರಾಯಣನ್, ಶ್ರೀಮತಿ ಅನುರಾಧಾ ಮತ್ತು ಶ್ರೀಹರಿ ಉಡುಪ ಹಾಗೂ ಶ್ರೀಮತಿ ವೈಜಯಂತಿರವರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು. ಸಂಘದ ಆಯ–ವ್ಯಯ ಪತ್ರ ಪರಿಶೀಲಿಸಿ, ತಯಾರಿಸಿ ಮತ್ತು ದೃಢೀಕರಿಸುತ್ತಿರುವ ಶ್ರೀ ಬಿ.ಎನ್. ಗೋವಿಂದ ಪ್ರಸಾದ್ ಮತ್ತು ಶ್ರೀಮತಿ ಇಂದಿರಾ, ಸಂಘದ ಕಾರ್ಯಕ್ರಮ ಹಾಗೂ ಸಮಾರಂಭಗಳ ಛಾಯಚಿತ್ರಗಳನ್ನು ಸತತವಾಗಿ ಸುಂದರವಾಗಿ ತೆಗೆದುಕೊಡುತ್ತಿರುವ ಹಿರಿಯ ಸದಸ್ಯ ಮತ್ತು ಬೃಹಚ್ಚರಣ ಪತ್ರಿಕೆಯ ನಿಕಟಪೂರ್ವ ಸಂಪಾದಕ ಶ್ರೀ ಕೆ.ಸಿ. ನಟರಾಜನ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತೀ ನಟರಾಜನ್, ಸಂಘದ ವಾರ್ಷಿಕ ಸರ್ವ ಸದಸ್ಯರ ವರದಿಯನ್ನು ದಾಖಲಿಸುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಲಲಿತಾ ಮತ್ತು ಶ್ರೀ ರಮೇಶ್‌ರವರನ್ನು ಸನ್ಮಾನಿಸಲಾಯಿತು. ಈ ಸನ್ಮಾನಗಳನ್ನು ಕಾರ್ಯದರ್ಶಿ ಶ್ರೀ ಎಸ್.ಸಿ. ಶ್ರೀನಿವಾಸ ನಡೆಸಿಕೊಟ್ಟರು.



ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಅನಿಲ್ ರಮೇಶ್‌ರವರು ವಂದನಾರ್ಪಣೆ ಮಾಡಿದರು. ಸಮಾರಂಭ ಸುಸೂತ್ರವಾಗಿ ನಡೆಯಲು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರಿಗೂ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಸಕಲರಿಗೂ ಸಂಘದ ಪರವಾಗಿ ವಂದನೆ ಸಲ್ಲಿಸಿದರು.


ಕಾರ್ಯಕ್ರಮವು ಭೋಜನದೊಂದಿಗೆ ಮುಕ್ತಾಯವಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೋವಿಡ್ ಮಾರ್ಗಸೂಚಿಯ ನಿಯಮಗಳನ್ನು ಅನುಸರಿಸಿ ಸಭೆಯನ್ನು ನಡೆಸಲಾಯಿತು. ಎರಡು ವರ್ಷಗಳ ನಂತರ ನಡೆದ ಈ ವಿಶೇಷ ಸರ್ವ ಸದಸ್ಯರ ಸಭೆಗೆ ಸುಮಾರು 350ಕ್ಕೂ ಹೆಚ್ಚು ಸದಸ್ಯರು, ದಾನಿಗಳು ಮತ್ತು ಅವರ ಕುಟುಂಬದವರು ಭಾಗವಹಿಸಿದ್ದು ಸಂತಸದ ವಿಷಯ.




**–ಹೆಚ್.ಆರ್. ಲಲಿತಾ**

**9945199637**


## ಧನ್ಯವಾದಗಳು



**ಸಂಘದ ಹಿರಿಯ ಸದಸ್ಯ ಶ್ರೀ ವಿ.ಛಾಯಾಪತಿರವರು ವಿದ್ಯಾನಿಧಿಗೆಂದು ರೂ. 25,000/– ಗಳನ್ನು ದೇಣಿಗೆ ನೀಡಿರುತ್ತಾರೆ. ಇದು ಶ್ರೀ ಛಾಯಾಪತಿರವರಿಗೆ ಸಂಘದ ಮೇಲಿನ ಅಭಿಮಾನ ತೋರಿಸುತ್ತದೆ. ಶ್ರೀಯುತರು ಸ್ವತಃ ಹಲವಾರು ದಶಕಗಳಿಂದ ತಮ್ಮನ್ನು ವಿದ್ಯಾಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದು, ವಿದ್ಯೆಯ ಬಗ್ಗೆ ಅವರಿಗಿರುವ ಕಾಳಜಿಯನ್ನು ಪ್ರಚುರಪಡಿಸುತ್ತದೆ.**

**ಶ್ರೀ ಛಾಯಾಪತಿ ಮತ್ತು ಅವರ ಕುಟುಂಬ ವರ್ಗದವರಿಗೆ ಐಶ್ವರ್ಯ, ಆಯುರಾರೋಗ್ಯ ಹಾಗೂ ನೆಮ್ಮದಿಯ ಜೀವನ ಕೊಡಲೆಂದು ಸಂಘವು ಭಗವಂತನನ್ನು ಪ್ರಾರ್ಥಿಸುತ್ತದೆ.**

# ಉಜ್ಜಯನಿಯ ಮಹಾಕಾಳೇಶ್ವರ



**ಎಲ್ಲಿದೆ?** ಈ ದೇವಾಲಯವು ಮಧ್ಯಪ್ರದೇಶದ ಕ್ಷಿಪ್ರಾ ನದಿಯ ದಂಡೆಯ ಮೇಲಿದೆ. ಇದು ಪುರಾಣಗಳಲ್ಲಿ ಅವಂತಿಕಾ ನಗರಿ ಎಂದು ವರ್ಣಿತವಾಗಿತ್ತು. ಇದನ್ನು ಭೂಮಿಯ ನಾಭಿ ಎಂದೂ ವರ್ಣಿಸಲಾಗಿದೆ. ಶ್ರೀ ಕೃಷ್ಣ–ಬಲರಾಮ–ಸುಧಾಮರು ಇಲ್ಲಿ ವಿದ್ಯಾಭ್ಯಾಸ ಮಾಡಿದರಂತೆ. ಪ್ರಸಿದ್ಧವಾದ ವಿಕ್ರಮಾದಿತ್ಯನ ಸಿಂಹಾಸನ ಇಲ್ಲಿಯೇ ಇತ್ತು ಎಂದು ಪ್ರತೀತಿ. ಉಜ್ಜಯನಿ ಹಲವಾರು ಬಂಗಾರದ ಕಲಶಗಳನ್ನು ಹೊಂದಿರುವ ದೇಗುಲಗಳನ್ನು ಹೊಂದಿರುವುದರಿಂದ "ಸ್ವರ್ಣ ಶೃಂಗ" ಎಂದೂ ಪ್ರಸಿದ್ಧವಾಗಿದೆ. ಬಹಳ ಹಿಂದೆ ಇಲ್ಲಿ ಅನೇಕ ವೇದಾಧ್ಯಯನ ಸಂಪನ್ನ ಶಿವ ಭಕ್ತರಿದ್ದರಂತೆ. ಅವರಲ್ಲಿ ವೇದಪ್ರಿಯನೆಂಬುವನು ತನ್ನ ನಾಲ್ಕು ಪುತ್ರರೊಂದಿಗೆ ಶಿವ ಕೈಂಕರ್ಯದಲ್ಲಿ ತೊಡಗಿದ್ದನಂತೆ. ಹೀಗಿರುವಾಗ, ದೂಷಣನೆಂಬ ರಾಕ್ಷಸನು ತನ್ನ ದುಷ್ಟ ಶಕ್ತಿಯೊಂದಿಗೆ ಇವರ ಮೇಲೆ ಎರಗಲು ಶಿವಪೂಜಾ ನಿರತರಾಗಿದ್ದ ತನ್ನ ಭಕ್ತರನ್ನು ಕಾಪಾಡಲು ಶಿವನು ಲಿಂಗಾಕಾರದಿಂದ ಮಹಾಕಾಳನಾಗಿ ಹೊರಬಂದು ರಾಕ್ಷಸ ಸಂಹಾರ ಮಾಡಿದನಂತೆ. ಕೊನೆಗೆ ಭಕ್ತರ ವಿನಂತಿ ಮೇರೆಗೆ ಅದೇ ಆಕಾರದಲ್ಲಿ ಜ್ಯೋತಿರ್ಮಯನಾಗಿ ನಿಂತನಂತೆ. ಉಜ್ಜಯನಿ ಪರಮ ಪವಿತ್ರವಾದ ಕ್ಷೇತ್ರ. ಇಲ್ಲಿ 7 ಸಾಗರ ತೀರ್ಥಗಳು, 28 ತೀರ್ಥಗಳು, 84 ಸಿದ್ಧಲಿಂಗಗಳು, 25–30 ಶಿವಲಿಂಗಗಳು, ಶ್ರೀಯಂತ್ರ ಸಹಿತ ಹರಿಸಿದ್ಧಿ ಮಾತಾಮಂದಿರ, ಬಡಾಗಣೇಶ್, ಗದ್ಕಾಲಿಕಾ ಪೂಜಾ ಮಂದಿರಗಳು, ಗೋಮತಿ ಕುಂಡ, ಸಂದೀಪಿನಿ ಆಶ್ರಮ ಮೊದಲಾದ ಯಾತ್ರಾ ಸ್ಥಳಗಳಿವೆ. ಇಲ್ಲಿಂದ 8 ಕಿ.ಮೀ. ದೂರದಲ್ಲಿ ಸ್ಥಿರಮಾನ ಗಣಪತಿ ದೇವಾಲಯವಿದೆ. ಉಜ್ಜಯನಿಯನ್ನು ಸಂದರ್ಶಿಸಿದವರೆಲ್ಲ ಗಣಪತಿಯನ್ನು ದರ್ಶನ ಮಾಡಲೇಬೇಕು.

**ಮಹಾಕಾಳೇಶ್ವರನ ವಿಶೇಷ :** ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಳೇಶ್ವರ ಐದು ಮಹಡಿಗಳ ಬೃಹತ್ ಶಿಲಾ ದೇವಸ್ಥಾನ. ವಿಶೇಷವೆಂದರೆ, ಇಲ್ಲಿ ಜ್ಯೋತಿರ್ಲಿಂಗವಿರುವುದು ಭೂಗರ್ಭದಲ್ಲಿ. ಶಿವನಿಗೆ ಇಲ್ಲಿ ಪ್ರತಿದಿನ ಹತ್ತಿರದ ಸ್ಮಶಾನದಿಂದ ತಂದ ಬೂದಿಯಿಂದಲೇ ಲೇಪನ. ನಂತರವೇ ಪೂಜೆ, ಅಭಿಷೇಕ. ಕಾಶಿ–ಗಯಾಗಳಂತೆ ಇಲ್ಲಿ ಕೂಡ 'ಪಿತೃಶ್ರಾದ್ಧ' ಮಾಡುತ್ತಾರೆ.

**ಇತರ ಮಂದಿರಗಳು :** ಉಜ್ಜಯನಿಯಲ್ಲಿ ಇನ್ನೂ ಅನೇಕ ದೊಡ್ಡ ದೊಡ್ಡ ದೇವಾಲಯಗಳಿವೆ. – ಶ್ರೀ ರಾಮ ಮಂದಿರ, ಗೋಪಾಲ ಮಂದಿರ, ಹರಿಸಿದ್ಧಿ ದೇವೀ ಮಂದಿರ. ಗಣೇಶ ಮಂದಿರ, ಸಂದೀಪಿನೀ ಆಶ್ರಮ, .ಹೀಗೆ ಅನೇಕ ನೋಡತಕ್ಕ ಸ್ಥಳಗಳಿವೆ. ಖಗೋಲ ವಿಜ್ಞಾನಕ್ಕೆ ಸಂಬಂಧಪಟ್ಟ ಜಂತರ್ ಮಂತರ್ ಪ್ರಯೋಗ ಮಂದಿರ ನೋಡಲೇಬೇಕಾದ ಸ್ಥಳ. ಗೋಪಾಲ ಮಂದಿರ ಬಹಳ ಸುಂದರವಾಗಿದೆ. ಕೃಷ್ಣಜನ್ಮಾಷ್ಟಮಿ ಬಹಳ ವೈಭವದಿಂದ ನಡೆಯುತ್ತದೆ.


**ಹರಿ–ಹರ :** ವೈಕುಂಠ ಚತುರ್ದಶಿಯ ದಿನ ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗದ ಉತ್ಸವ ಇರುತ್ತದೆ. ಹರಿ–ಹರ ಮಿಲನದ ಉತ್ಸವ ಆ ದಿನ ನಡೆಯುತ್ತದೆ. ಶ್ರೀ ಮಹಾಕಾಳೇಶ್ವರನಿಗೆ ಪ್ರಾತಃ ಸಮಯದಲ್ಲಿ ನಡೆಯುವ ಭಸ್ಮಾರತಿ ಬಹಳ ವಿಶೇಷವಾದುದು. ಪ್ರತಿದಿನ ಐದು ಬಾರಿ ಈ ಶ್ರೀ ಮಹಾಕಾಳೇಶ್ವರ ಜ್ಯೋತಿರ್ಲಿಂಗಕ್ಕೆ ವಿಶೇಷ ಆರತಿ ನಡೆಯುತ್ತದೆ. ಶಿವರಾತ್ರಿಯಲ್ಲಿ ಬಹಳ ಜನಸಂದಣಿ ಇರುವುದು.

**ಕುಂಭಮೇಳ :** ಹರಿದ್ವಾರ, ಪ್ರಯಾಗ, ನಾಸಿಕದಂತೆ ಇಲ್ಲಿಯೂ ಹನ್ನೆರಡು ವರ್ಷಕ್ಕೊಮ್ಮೆ ಕುಂಭಮೇಳ ನಡೆಯುತ್ತದೆ. ಲಕ್ಷಾಂತರ ಜನರು ಸೇರುತ್ತಾರೆ. ಕ್ಷಿಪ್ರಾ ನದಿಯಲ್ಲಿ ಸ್ನಾನ ಮಾಡಿ ತರ್ಪಣ ಕೊಡುತ್ತಾರೆ. ನದಿಯ ಸ್ನಾನಘಟ್ಟಗಳು ವಿಶಾಲವಾಗಿ ಚೆನ್ನಾಗಿವೆ. ಸಮುದ್ರ ಮಥನ ಕಾಲದಲ್ಲಿ ಹುಟ್ಟಿದ ಅಮೃತದ ಬಿಂದುಗಳು ಈ ನಾಲ್ಕು ಸ್ಥಳಗಳಲ್ಲಿ ಬಿದ್ದುದರಿಂದ ಪರ್ವಕಾಲದಲ್ಲಿ ಈ ನದಿಗಳಲ್ಲಿ ಸ್ನಾನ ಮಾಡುವುದರಿಂದ ಮುಕ್ತಿ ದೊರಕುವುದೆಂದು ಹೇಳುತ್ತಾರೆ. ದೇಶದ ನಾನಾ ಭಾಗಗಳಿಂದ ಭಕ್ತರು ಹಾಗೂ ವಿದೇಶೀಯರೂ ಸಹ ಕುಂಭ ಮೇಳದ ಸಮಯದಲ್ಲಿ ಇಲ್ಲಿಗೆ ಆಗಮಿಸುತ್ತಾರೆ.

**ಹೇಗೆ ಹೋಗುವುದು?** ಉಜ್ಜಯನಿ, ನಾಗ್ಡ ಹಾಗೂ ಭೂಪಾಲ್ ನಡುವಿನ ರೈಲು ನಿಲ್ದಾಣ.

**ಎಲ್ಲಿಂದ, ಎಷ್ಟು ದೂರ?** ಭೂಪಾಲ್ ಇಂದ 184 ಕಿ.ಮೀ., ಇಂದೋರ್ ಇಂದ 55 ಕಿ.ಮೀ., ಅಹಮದಾಬಾದ್ ಇಂದ 475 ಕಿ.ಮೀ., ದೆಹಲಿಯಿಂದ 749 ಕಿ.ಮೀ., ಬೆಂಗಳೂರಿನಿಂದ 1483 ಕಿ.ಮೀ.

**ವಸತಿ :** ಧರ್ಮಶಾಲೆ ಮತ್ತು ಹೋಟೆಲ್‌ಗಳು ಸಾಕಷ್ಟಿವೆ. ಮೊದಲಿಗಿಂತಲೂ ವಸತಿ ಸೌಕರ್ಯಗಳು ಹೆಚ್ಚಾಗಿದ್ದು, ಪ್ರಯಾಣಿಕರಿಗೆ ಅನುಕೂಲವಿದೆ.



**ಅನಿಲ್ ರಮೇಶ್**
9980027189

# ಪ್ರತಿಭಾವಂತ, ಸಹೃದಯಿ – ಜಿ.ಎಸ್. ಸತ್ಯಮೂರ್ತಿ



ಶ್ರೀಯುತ ಸತ್ಯಮೂರ್ತಿರವರು ದಿನಾಂಕ 16.11.1941ರಂದು ಭದ್ರಾವತಿಯಲ್ಲಿ ದಿವಂಗತ ಗುಂಜೂರು ಶ್ರೀನಿವಾಸಯ್ಯ ಮತ್ತು ದಿವಂಗತ ಕಮಲಮ್ಮ ದಂಪತಿಗಳ ಜ್ಯೇಷ್ಠ ಪುತ್ರನಾಗಿ ಜನಿಸಿದರು. ಶ್ರೀಯುತರಿಗೆ ಇಬ್ಬರು ಸಹೋದರರು ಹಾಗೂ ನಾಲ್ಕು ಸಹೋದರಿಯರು.

ಶ್ರೀ ಸತ್ಯಮೂರ್ತಿಯವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹಿರೇಭಾಸ್ಕರದಲ್ಲಿ ಪ್ರಾರಂಭಿಸಿದರು. ಪ್ರೈಮರಿ ಮತ್ತು ಮಾಧ್ಯಮಿಕ ತರಗತಿಗಳನ್ನು ವಿವಿಧ ಶಾಲೆಗಳಲ್ಲಿ ಕಲಿತು ಇಂಟರ್ ಮಿಡಿಯೇಟ್ಟನ್ನು ಬೆಂಗಳೂರು ಸರ್ಕಾರಿ ಶಾಲೆಯಲ್ಲಿ ಮುಗಿಸಿದ ನಂತರ ಹೆಚ್.ಎ.ಎಲ್. ನಲ್ಲಿ ತರಬೇತಿಗಾಗಿ ಸೇರಿದರು. ಯಮಲೂರಿನ ಬಂಡೆ ಹೊಲ ಮತ್ತು ಅಲ್ಲಿನ ಪ್ರಕೃತಿ ಸೌಂದರ್ಯ ಅವರಿಗೆ ಸುಂದರ ನೆನಪುಗಳು. ಮುಂದೆ ಮುಂಬೈನಲ್ಲಿ ಎರಡು ವರ್ಷದ ತರಬೇತಿಯ ನಂತರ ಹೆಚ್.ಎ.ಎಲ್. ವತಿಯಿಂದಲೇ ಡಿಪ್ಲೋಮಾ ಪರೀಕ್ಷೆಯನ್ನು ಪೂರೈಸಿದರು. ಶ್ರೀಯುತರು 1966ರಲ್ಲಿ ಶ್ರೀಮತಿ ರತ್ನರವರನ್ನು ವಿವಾಹವಾದರು. ಸುಮಾರು 38 ವರ್ಷಗಳ ಕಾಲ ಹೆಚ್.ಎ.ಎಲ್. ಕಾರ್ಖಾನೆಯಲ್ಲಿ ಸಾರ್ಥಕ ಸೇವೆ ಸಲ್ಲಿಸಿ ನಿವೃತ್ತರಾದರು.

ಶ್ರೀಯುತರದು ಮುಖ್ಯ ವೃತ್ತಿ ಕಾರ್ಖಾನೆಯಲ್ಲಾದರೂ ಆಸಕ್ತಿ ಮತ್ತು ಹವ್ಯಾಸಗಳು ಹಲವಾರು. ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಚರ್ಚಾ ಸ್ಪರ್ಧೆ ಮತ್ತು ಭಾಷಣಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದರು. ಹೆಚ್.ಎ.ಎಲ್.ನಲ್ಲಿ ಸ್ನೇಹಿತರ ಸಹವಾಸದಿಂದ ಇವರ ಸಾಹಿತ್ಯದ ಅಭಿರುಚಿ ಬೆಳೆಯತೊಡಗಿತು. ಇದಲ್ಲದೆ ಪ್ರವೃತ್ತಿಯಾಗಿ ವಿಜ್ಞಾನ, ಗಣಿತ ಮತ್ತು ಕನ್ನಡ ವಿಷಯಗಳ ಬೋಧನೆ ಇವರಿಗೆ ಬಹು ಪ್ರಿಯ. ಅದು ಇವರಿಗೆ ತೃಪ್ತಿ ಮತ್ತು ಗೌರವವನ್ನು ತಂದಿತು.

ಶ್ರೀ ಸತ್ಯಮೂರ್ತಿಯವರಿಗೆ ಬರವಣಿಗೆಯಲ್ಲೂ ಆಸಕ್ತಿ ಇದ್ದುದರಿಂದ ಸಣ್ಣ, ಸಣ್ಣ ಲೇಖನಗಳನ್ನು ಬರೆದುದಲ್ಲದೇ ಎರಡು ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಇವರು ಅನೇಕ ನಾಟಕಗಳಲ್ಲಿ ಅಭಿನಯಿಸಿ, ನಿರ್ದೇಶನವನ್ನು ಮಾಡಿದ್ದಾರೆ. ಮೂರು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿದ ಸುಮಾರು ಇನ್ನೂರು ಕಲಾವಿದರನ್ನು ಪರೀಕ್ಷಿಸಿ ತೀರ್ಪುಗಾರರಾಗಿ ಬಹುಮಾನಗಳನ್ನು ನಿರ್ಧರಿಸುವ ಕ್ಲಿಷ್ಟ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕನ್ನಡ ಚಳುವಳಿಯ ಸಮಯದಲ್ಲಿ ಅ.ನ.ಕೃರವರ ಜೊತೆ ಕನ್ನಡತನವನ್ನು ಬೆಳಸಲು ಇವರು ಪಟ್ಟ ಶ್ರಮ ದೊಡ್ಡದು. ನಿವೃತ್ತಿಯ ನಂತರ ಪುಸ್ತಕ ಬರೆಯುವ ಹವ್ಯಾಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

**ಇವರು ಹೊರತಂದಿರುವ ಪುಸಕ್ತಗಳು:**



- ❖ ಸಾಹಿತ್ಯ ಶ್ರೀಮಂತ ಸಾಹಿತಿ ಧೀಮಂತ–ಡಿವಿಜಿ–ಕನ್ನಡ ಕುಲೋದ್ಧಾರಕರ ಮಾಲಿಕೆ
- ❖ ಜಗದ ಬಾಳೆಯ ತೋಟ – ಕವನ ಸಂಕಲನ
- ❖ ಬಂಡೆ ಹೊಲದ ನಡುವೆ – ಜೀವನ ಚಿತ್ರ
- ❖ ವೈದ್ಯೋನಾರಾಯಣ ಪಿಸ್ಸೇಃ – ಸ್ನೇಹದ ಸವಿ ಸವಿ ನೆನಪು
- ❖ ಶಿರಡಿ ಸ್ವಾಮಿಯ ಅಡಿದಾವರೆಯಲ್ಲಿ – ಅನುವಾದ
- ❖ ಕನ್ನಡಿಯಲ್ಲಿ ಕಂಡ ಮುಖ – ಕವನ ಚಿತ್ತಾರ
- ❖ ಸಿಕ್ಕಷ್ಟೇ ಲಭ್ಯ – ಬರಹಗಳು
- ❖ ಕದಂಬ – ಕತೆ, ಕವನ, ಧಾರ್ಮಿಕ ಬರಹಗಳು, ಲಘು ಬರಹಗಳು, ವಿಚಾರ ಮತ್ತು ನಿಬಂಧಗಳನ್ನು ಒಳಗೊಂಡ ಕೃತಿ
- ❖ ಚೀಟಿ ಎತ್ತಿ ಮಾತನಾಡಿ ಪ್ಲೀಸ್ – ಆಶುಭಾಷಣ ಸ್ಪರ್ಧೆಗೆ ವಿಷಯಗಳು
- ❖ ಹೆಮ್ಮರ – ಡಿವಿಜಿ
- ❖ ವಿಜ್ಞಾನ ಲೇಖನಗಳು
- ❖ ಸಂಸ್ಕೃತ – ಕನ್ನಡ ಅನುವಾದ
- ❖ ಹೃದಯ ಸಂವಾದ – ಸ್ವಾನುಭವ ಕಥನ

ಶ್ರೀ ಸತ್ಯಮೂರ್ತಿಯವರ ಅಗಾಧ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ–ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿದೆ.

- ➢ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು – ಕನ್ನಡ ಸೇವಾ ಸಾಹಿತ್ಯ ಪ್ರಶಸ್ತಿ
- ➢ ಕನ್ನಡೇತರರಿಗೆ ಕನ್ನಡ ಬೋಧನಾ ಕಾಯಕ – ವೆಂಕಟಾಪುರದಲ್ಲಿ ಸನ್ಮಾನ
- ➢ ಬಿ.ಟಿ.ಎಂ. ವೆಲ್ ಫೇರ್ ಅಸೋಸಿಯೇಷನ್‌ನಿಂದ ರಾಜ್ಯೋತ್ಸವ ಪ್ರಶಸ್ತಿ
- ➢ ಹೆಚ್.ಎ.ಎಲ್. ಏರೋ ಎಂಜಿನ್ಸ್ ಕರ್ನಾಟಕ ಸಂಘದಿಂದ ಸನ್ಮಾನ
- ➢ ಕನ್ನಡ ಸೇವಾ ಸಮಾಜದ ಅಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಯಾಗಿ ಮಾಡಿದ ಸೇವೆಗೆ ಪುರಸ್ಕಾರಗಳು.

ಶ್ರೀ ಸತ್ಯಮೂರ್ತಿಯವರು ತಮ್ಮ 81 ವರ್ಷದ ಇಳಿ ವಯಸ್ಸಿನಲ್ಲೂ ಪುಸ್ತಕ ಪ್ರಕಟಿಸಿದ್ದು ಇವರಿಗೆ ಬರವಣಿಗೆಯ ಬಗ್ಗೆ ಇರುವ ಉತ್ಸಾಹವನ್ನು ತೋರಿಸುತ್ತದೆ. ಹೀಗೆ ಇವರು ನಾನಾ ಪ್ರವೃತ್ತಿಗಳಲ್ಲಿ ತೊಡಗಿಕೊಂಡಿರುವುದು ನಮ್ಮ ಸಮುದಾಯದ ಸದಸ್ಯರಿಗೆಲ್ಲಾ ಸ್ಫೂರ್ತಿದಾಯಕ.

**– ಆರ್. ರಮೇಶ್**
**9886034048**

# ಸ್ವಾತಂತ್ರ್ಯದ ಅಮೃತ ಮಹೋತ್ಸವ

ಭಾರತಕ್ಕೆ ಸ್ವಾತಂತ್ರ್ಯ ಬಂದು 2022ಕ್ಕೆ 75 ವರ್ಷಗಳು ತುಂಬಿದೆ. ಈ ಸ್ವಾತಂತ್ರ್ಯ ಹಬ್ಬವನ್ನು ನಾವು ಅದ್ದೂರಿಯಾಗಿ ಆಚರಿಸಬೇಕು. ಇದರ ಬಗ್ಗೆ ಕೆಲವು ಹಿಂದಿನ ನೆನಪುಗಳನ್ನು ಸ್ಮರಿಸಲು ಮತ್ತು ಹಂಚಿಕೊಳ್ಳಲು ಇಷ್ಟಪಡುತ್ತೇನೆ.

ಭಾರತೀಯರಿಗೆ ದಿನಾಂಕ 15.8.1947 ಅತ್ಯಂತ ಮಹತ್ವದ ದಿನವಾಗಿದೆ. ಇದನ್ನು ಇತಿಹಾಸದಲ್ಲೂ ಶಾಶ್ವತವಾಗಿ ಉಲ್ಲೇಖಿಸಲಾಗಿದೆ. ಅಂದು ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಹಲವು ವರ್ಷಗಳ ಕಠಿಣ ಹೋರಾಟದಿಂದ ನಮಗೆ ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯ ದೊರೆತ ದಿನ. ಇದಕ್ಕಾಗಿ ಪ್ರಾಣವನ್ನು ಅರ್ಪಿಸಿದ ಮಹಾನ್ ನಾಯಕರ ಎಲ್ಲಾ ತ್ಯಾಗಗಳನ್ನು ನೆನಪಿಸಿಕೊಳ್ಳಬೇಕು.

ಭಾರತೀಯರಾದ ನಾವೆಲ್ಲರೂ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಮೂಲಭೂತ ಹಕ್ಕುಗಳನ್ನು ಪಡೆದುಕೊಂಡಿದ್ದೇವೆ. ಇದು ಹೆಮ್ಮೆ ಪಡುವ ವಿಷಯವಾಗಿದೆ. ಭಾರತವು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವಾಗಿದೆ.

ಅಂದು ಸ್ವತಂತ್ರ್ಯ ಪಡೆದ ಭಾರತೀಯರು ತಮ್ಮ ಮೊದಲ ಪ್ರಧಾನಮಂತ್ರಿಯಾಗಿ ಪಂಡಿತ್ ಜವಹರಲಾಲ್ ನೆಹರು ಅವರನ್ನು ಆಯ್ಕೆ ಮಾಡಿದರು. ಅವರು ರಾಷ್ಟ್ರ ರಾಜಧಾನಿ ನವದೆಹಲಿಯ ಕೆಂಪು ಕೋಟೆಯಲ್ಲಿ ಮೊದಲ ಬಾರಿಗೆ ತ್ರಿವರ್ಣ ಧ್ವಜವನ್ನು ಹಾರಿಸಿದರು. ಪ್ರತೀ ಭಾರತೀಯನು ಈ ವಿಶೇಷ ದಿನವನ್ನು ಉತ್ಸಾಹ ಮತ್ತು ಸಂತೋಷದಿಂದ, ಯಾವುದೇ ಜಾತಿ, ಧರ್ಮ, ಪ್ರಾಂತ್ಯ, ಭಾಷೆ, ಸಂಸ್ಕೃತಿಗಿಂತ ಮಿಗಿಲಾದದು ಎಂದು ತಿಳಿದಿದ್ದಾನೆ.

ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಛೇರಿಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಆಗಸ್ಟ್ 15ರ ಶುಭ ಸಂದರ್ಭವನ್ನು ಸ್ವಾತಂತ್ರ್ಯೋತ್ಸವ ಎಂದು ಆಚರಿಸಲಾಗುತ್ತದೆ.

ಭಾರತದಲ್ಲಿ ಬ್ರಿಟೀಷರ ಆಡಳಿತ ಸುಮಾರು ಶತಮಾನಗಳ ಕಾಲವಿತ್ತು. ಆಗ ಜನರ ಬದುಕು ಬಹಳ ದುಸ್ತರವಾಗಿತ್ತು. ಭಾರತೀಯರನ್ನು ಗುಲಾಮರಂತೆ ನೋಡುತ್ತಿದ್ದರು. ಯಾವ ಹಕ್ಕು ಇಲ್ಲದೆ ಬ್ರಿಟೀಷ್ ಅಧಿಕಾರಿಗಳ ಕೈಗೊಂಬೆ ಆಗಿದ್ದರು. ಬ್ರಿಟೀಷ್ ಆಡಳಿತ ವಿರುದ್ಧ ಸಿಡಿದೆದ್ದ ಭಾರತೀಯರನ್ನು ಬಂಧಿಸಿ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದರು. ರೈತರು ಬೆಳೆ ಬೆಳೆದರೂ ಹಸಿವಿನಿಂದ ಸಾಯುತ್ತಿದ್ದರು. ಭಾರಿ ಮೊತ್ತದ ಭೂ ತೆರಿಗೆ ಪಾವತಿಸಬೇಕಾಗಿತ್ತು. ಸ್ವಾತಂತ್ರ್ಯ ಪಡೆಯಲು ನಮ್ಮ ದೇಶದ ಅನೇಕ ಮಹಾನ್ ಕ್ರಾಂತಿಕಾರಿಗಳು ದೈಹಿಕ ಮತ್ತು ಮಾನಸಿಕ ಕಿರುಕುಳಕ್ಕೊಳಗಾದರು. ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟಗಾರರು ದೇಶಕ್ಕಾಗಿ ತಮ್ಮ ತನು, ಮನ, ಧನ ಮತ್ತು ಪ್ರಾಣತ್ಯಾಗ ಮಾಡಿದರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಿಳಿದು ಸಾಮಾನ್ಯ ಜನರನ್ನು ಬರವಣಿಗೆ, ಭಾಷಣ, ಉಪವಾಸ ಮತ್ತು ಸತ್ಯಾಗ್ರಹದ ಮೂಲಕ ಸ್ವಾತಂತ್ರ್ಯ ಪಡೆಯಲು ಉತ್ತೇಜಿಸಿದರು. ಇದರ ಪ್ರಭಾವದಿಂದ ದೇಶದ ಎಲ್ಲಾ ಪ್ರಾಂತ್ಯಗಳಿಂದಲೂ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿ ಭಾಗವಹಿಸಿದರು.

ಸರದಾರ್ ವಲ್ಲಭಭಾಯ್ ಪಟೇಲ್, ಬಾಲ ಗಂಗಾಧರ ತಿಲಕ್, ಲಾಲ ಲಜಪತರಾಯ್‌ರವರು ಸಮಾಜದಲ್ಲಿದ್ದ ಮೂಢನಂಬಿಕೆಗಳನ್ನು ತೊಡೆದು ಹಾಕುವುದರ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಾಗಿ ನಿಂತರು. ಕೆಲವು ಸಂಘಟನೆಯೊಂದಿಗೆ ಮಂಗಲ್ ಪಾಂಡೆ, ಚಂದ್ರಶೇಖರ ಆಜಾದ್, ಭಗತ್ ಸಿಂಗ್, ರಾಜಗುರು ಇನ್ನೂ ಮುಂತಾದ ಅನೇಕರು ಹೋರಾಡಿ ಕ್ರಾಂತಿಕಾರಿಗಳು ಎಂದು ಹೆಸರು ಪಡೆದರು. ಸುಭಾಷ್ ಚಂದ್ರಬೋಸ್‌ರವರು ದೇಶದಿಂದ ಹೊರಗಿದ್ದುಕೊಂಡು ಸೈನ್ಯ ಕಟ್ಟಿ ಸೈನಿಕರಿಗೆ ತರಬೇತಿ ಕೊಟ್ಟು ಬ್ರಿಟೀಷರ ವಿರುದ್ಧ ಹೋರಾಡಲು ತಯಾರು ಮಾಡಿದರು. ಇದಲ್ಲದೆ ಇತಿಹಾಸದ ಪುಟಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಜೀವ ತೆತ್ತ ಲಕ್ಷಾಂತರ ಭಾರತೀಯರ ಹೆಸರುಗಳು ಅವ್ಯಕ್ತವಾಗೇ ಉಳಿದಿದೆ. ಈ ಮಹನೀಯರುಗಳಿಗೂ ಸ್ವತಂತ್ರ್ಯ ಭಾರತ ಪ್ರಜೆಯ ಕೋಟಿ, ಕೋಟಿ ನಮನಗಳು ಸಲ್ಲಬೇಕು.

"ವಿವಿಧತೆಯಲ್ಲಿ ಏಕತೆ" ಎಂಬುದು ಭಾರತದ ಸತ್ವ ಮತ್ತು ಶಕ್ತಿ. ಭಾರತ ದೇಶಾದ್ಯಂತ ರಾಷ್ಟ್ರೀಯತೆ ಮತ್ತು ದೇಶಭಕ್ತಿ ಭಾವನೆಯೊಂದಿಗೆ ಭಾರತೀಯರು ಸ್ವಾತಂತ್ರ್ಯ ದಿನ ಆಚರಿಸುತ್ತಾರೆ. ಇದನ್ನು ರಾಷ್ಟ್ರೀಯ ಹಬ್ಬವಾಗಿಯೂ ಘೋಷಿಸಲಾಗಿದೆ. ಈ 75ನೇ ವರ್ಷದ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲೂ ಮತ್ತು ಇನ್ನು ಮುಂದೆ ಎಂದೆಂದೂ ಭಾರತ ಮಾತೆಯ ಮಡಿಲಲ್ಲಿ ಜನಿಸಿರುವ ನಾವುಗಳೇ ಧನ್ಯರು. ಇಷ್ಟೆಲ್ಲಾ ಕಷ್ಟಪಟ್ಟು ಗಳಿಸಿದ ನಮ್ಮ ಸ್ವಾತಂತ್ರ್ಯವನ್ನು ಸ್ವಚ್ಛಂದಕ್ಕಾಗಿ ಬಳಸಿಕೊಳ್ಳದೆ ಭಾರತೀಯ ನಾಗರೀಕನಿಗಿರುವ ಕರ್ತವ್ಯವನ್ನು ಪಾಲಿಸಿ, ಹಕ್ಕು ಮತ್ತು ಬಾಧ್ಯತೆಗಳನ್ನು ಗೌರವಿಸಿ ಭಾರತವನ್ನು ವಿಶ್ವಗುರುವನ್ನಾಗಿ ಮಾಡುವ ಸಂಕಲ್ಪದ ಜವಾಬ್ದಾರಿಯು ಪ್ರತೀ ಪ್ರಜೆಯ ಧ್ಯೇಯೋದ್ದೇಶವಾಗಿರಬೇಕು.



*** ಭಾರತ್ ಮಾತಾ ಕಿ ಜೈ ವಂದೇ ಮಾತರಂ ***

ಹೆಚ್.ಪಿ.ಸೂರ್ಯಕುಮಾರಿ
9980162364


## ಅಭಿನಂದನೆಗಳು



**ಸಂಘದ ಸದಸ್ಯರಾದ ಶ್ರೀ ಆರ್.ಎಸ್. ರಮೇಶ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್.ಬಿ.ಐ.) ದಲ್ಲಿ ಚೀಫ್ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾದ ನಂತರ ಈಗ ಎಸ್.ಬಿ.ಐ. ಜನರಲ್ ಇನ್ಶ್ಯೂರೆನ್ಸ್ ಕಂಪನಿಯಲ್ಲಿ ಮುಖ್ಯ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದಾರೆ. ಸಂಘವು ಶ್ರೀಯುತರನ್ನು ಅಭಿನಂದಿಸುತ್ತಾ ಅವರಿಗೆ ನೂತನ ಕಾರ್ಯಕ್ಷೇತ್ರದಲ್ಲಿ ಯಶಸ್ಸನ್ನು ಹಾರೈಸುತ್ತದೆ.**

ಬಾಲ ಪ್ರತಿಭೆ

## ಪ್ರಣವಿ – ಉದಯೋನ್ಮುಖ ಕಲಾವಿದೆ



ಕುಮಾರಿ ಪ್ರಣವಿ, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ. ಗುಂಡಪ್ಪ ಹಾಗೂ ಸದಸ್ಯೆ ಶ್ರೀಮತಿ ಲೀಲಾವತಿ ಗುಂಡಪ್ಪನವರ ಮೊಮ್ಮಗಳು. ಪ್ರಣವಿಯು ಸಂಗೀತ ಕಲಾವಿದರ ಕುಟುಂಬದಿಂದ ಬಂದವರು. ತಂದೆ ಸಂಘದ ಸದಸ್ಯ, ಖ್ಯಾತ ಖಂಜಿರ ಕಲಾವಿದ ಶ್ರೀ ಗುರು ಪ್ರಸನ್ನ. ತಾಯಿ, ಶ್ರೀಮತಿ ಪಲ್ಲವಿ ಗುರು ಪ್ರಸನ್ನ ಸಂಗೀತ ಮತ್ತು ರಂಗೋಲಿ ಕಲಾ ಮಾಧ್ಯಮದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವರು.

ಕುಮಾರಿ ಪ್ರಣವಿಯ ಸಂಗೀತ ಕಲಿಕೆ ಆರಂಭವಾದದ್ದು ಅವರ 6ನೆಯ ವಯಸ್ಸಿನಲ್ಲಿ. ಕರ್ನಾಟಕ ಸಂಗೀತ ಹಾಡುಗಾರಿಕೆಯನ್ನು ಅವರ ತಾಯಿ ಶ್ರೀಮತಿ ಪಲ್ಲವಿಯಿಂದ ಮತ್ತು ವಯೋಲಿನ್ ವಾದನವನ್ನು ಪ್ರಖ್ಯಾತ ವಯೋಲಿನ್ ಕಲಾವಿದ ವಿದ್ವಾನ್ ಹೆಚ್.ಕೆ. ವೆಂಕಟರಾಮ್‌ರವರಿಂದ ಕಲಿತರು. ನಂತರ ಮೇರು ಕಲಾವಿದರಾದ ವಿದ್ವಾನ್ ಶ್ರೀ ಪಟ್ಟಾಭಿರಾಮ್ ಪಂಡಿತ್‌ರವರ ಬಳಿ ಹಾಡುಗಾರಿಕೆಯನ್ನು ಮುಂದುವರೆಸಿದರು. ಈಗ ಹಾಡುಗಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆಯುವದಕ್ಕಾಗಿ ಅನೇಕ ಶಿಷ್ಯರನ್ನು ತಯಾರು ಮಾಡುತ್ತಿರುವ ಕರ್ನಾಟಕದ ಹೆಮ್ಮೆಯ ಸಂಗೀತ ವಿದೂಷಿ ಶ್ರೀಮತಿ ಕಲಾವತಿ ಅವಧೂತರವರಲ್ಲಿ ಸಂಗೀತ ಅಭ್ಯಾಸವನ್ನು ಮುಂದುವರೆಸುತ್ತಿದ್ದಾರೆ.

ಪ್ರಣವಿಯು ತನ್ನ 9ನೇ ವಯಸ್ಸಿನಲ್ಲೇ ಶ್ರೀ ಕಂಚಿ ಕಾಮಕೋಟಿ ಪೀಠಮ್‌ನಲ್ಲಿ ಗುರು ವಿದ್ವಾನ್ ಶ್ರೀ ಹೆಚ್.ಕೆ. ವೆಂಕಟರಾಮನ್‌ರವರ ನೇತೃತ್ವದಲ್ಲಿ ವಿಜಯ ಕಾಲೇಜ್ ಆಫ್ ಮ್ಯೂಸಿಕ್ ಮೂಲಕ ತನ್ನ ಮೊದಲ ವಯೋಲಿನ್ ಕಾರ್ಯಕ್ರಮವನ್ನು ನೀಡಿದ್ದಾರೆ.

ಪ್ರಣವಿಯು ಪ್ರತಿಷ್ಠಿತ ಸಂಸ್ಥೆಗಳಾದ ಶ್ರೀ ವಾಣಿ ಕಲಾಕೇಂದ್ರ, ಪ್ರತ್ಯಾರ್ಪಣ ಫೌಂಡೇಶನ್, ದಶಪ್ರಮತಿ ಸಂಗೀತ ಸಭಾ, ಶ್ರೀ ರಾಮಸೇವಾ ಮಂಡಳಿ, ಶ್ರೀ ವಾಣಿ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ವೀಣಾಧಾರಿ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸಮತ್ವ ಫೌಂಡೇಶನ್ ಮತ್ತು ಮುಂತಾದವುಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿರುತ್ತಾರೆ.

ಕುಮಾರಿ ಪ್ರಣವಿ ಹಾಡುಗಾರಿಕೆ ಮತ್ತು ವಯೋಲಿನ್‌ನಲ್ಲಿ ಮಾಡಿರುವ ಸಾಧನೆಗಳು:

- ಕರ್ನಾಟಕ ಸರ್ಕಾರ ಪ್ರೌಢಶಾಲಾ ಶಿಕ್ಷಣಾ ಮಂಡಳಿಯು 2021–22ರಲ್ಲಿ ಆಯೋಜಿಸಿದ್ದ ಹಾಡುಗಾರಿಕೆ ಮತ್ತು ವಯೋಲಿನ್ ಜೂನಿಯರ್ ವಿಭಾಗದಲ್ಲಿ ಅನುಕ್ರಮವಾಗಿ 99/100 ಮತ್ತು 100/100 ಅಂಕಗಳ ಗಳಿಕೆ.
- ಮಲ್ಲೇಶ್ವರಂ ಸಂಗೀತ ಸಭಾದಿಂದ ಮೊದಲನೆ ಬಹುಮಾನ
- ಗಾಯನ ಸಮಾಜದಿಂದ ಎರಡನೆಯ ಬಹುಮಾನ
- ಕಲಾಸೌರಭ ಅಂತರರಾಷ್ಟ್ರೀಯ ಸಂಗೀತ ಮತ್ತು ನೃತ್ಯ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ
- ಗ್ಲೋಬಲ್ ಮ್ಯೂಸಿಕ್ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ
- ಹೆರಿಟೇಜ್ ಆರ್ಟ್ಸ್ ಮತ್ತು ಕಲ್ಚರಲ್ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ
- ಶ್ರೀ ರಾಮಸೇವಾ ಮಂಡಳಿಯಿಂದ ಪ್ರತಿಭಾ ಪುರಸ್ಕಾರ

ಕುಮಾರಿ ಪ್ರಣವಿ ಪ್ರಸ್ತುತ ಸುದರ್ಶನ್ ವಿದ್ಯಾ ಮಂದಿರದ ಹತ್ತನೆಯ ತರಗತಿಯಲ್ಲಿ ಐ.ಸಿ.ಎಸ್.ಸಿ. ಪಠ್ಯಕ್ರಮದಲ್ಲಿ ಓದುತ್ತಿದ್ದಾರೆ. ಈ ಶಾಲೆಯಲ್ಲಿ ಎಸ್.ಐ.ಪಿ ಅಬಾಕಸ್‌ನಲ್ಲಿ ಅತ್ಯಂತ ಕಿರಿ ವಯಸ್ಸಿನ "ಗ್ರ್ಯಾಂಡ್ ಮಾಸ್ಟರ್" ಆಗಿದ್ದಾರೆ. ಶಿಕ್ಷಣದಲ್ಲಿ ಹಾಗೂ ಸಂಗೀತ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಾಧನೆ ಮಾಡಿ ಪೋಷಕರಿಗೆ, ಗುರುಗಳಿಗೆ, ನಮ್ಮ ಸಮುದಾಯಕ್ಕೆ, ರಾಜ್ಯಕ್ಕೆ ಮತ್ತು ದೇಶಕ್ಕೆ ಖ್ಯಾತಿ ತರಲೆಂದು ಸಂಘವು ಹಾರೈಸುತ್ತದೆ. ಸವಿವರಗಳನ್ನು ನೀಡಿದ ಶ್ರೀ ಗುರು ಪ್ರಸನ್ನರವರಿಗೆ ಧನ್ಯವಾದಗಳು


ಹೆಚ್.ಆರ್. ಲಲಿತಾ
9945199637


## ಕೃತಜ್ಞತಾಪೂರ್ವಕ ಧನ್ಯವಾದಗಳು

**ಸಂಘದ ಹಿರಿಯ ಸದಸ್ಯ ದಿವಂಗತ ಕೆ.ಆರ್. ಲಕ್ಷ್ಮೀನಾರಾಯಣ್‌ರವರ ಪತ್ನಿ ಶ್ರೀಮತಿ ಕೆ.ಎಲ್. ಸರೋಜರವರು ತಮ್ಮ ಪತಿಯ ನೆನಪಿನಲ್ಲಿ ವಿದ್ಯಾನಿಧಿಗೆಂದು ರೂ. 1,00,000/– ಗಳನ್ನು ದೇಣಿಗೆ ನೀಡಿರುತ್ತಾರೆ. ಈ ದೇಣಿಗೆಯು ಶ್ರೀಮತಿ ಸರೋಜರವರಿಗೆ ಸಂಘದ ಮೇಲಿನ ಅಭಿಮಾನ ಮತ್ತು ವಿದ್ಯೆಯ ಬಗ್ಗೆ ಇರುವ ಕಳಕಳಿಯನ್ನು ತೋರಿಸುತ್ತದೆ.**

**ಶ್ರೀಮತಿ ಸರೋಜರವರಿಗೆ ಆಯುರಾರೋಗ್ಯ ಹಾಗೂ ನೆಮ್ಮದಿಯ ಜೀವನ ದೊರಕಲೆಂದು ಸಂಘವು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

## ನಗುವೆಂಬ ಆಭರಣ ಧರಿಸಿ ನಿಮ್ಮ ದೇಹ ಕಾಪಾಡಿಕೊಳ್ಳಿ

ಅನೇಕರಿಗೆ ತಮ್ಮ ದೇಹದ ಬಗ್ಗೆ ಒಂದು ಕೊರಗು ಇದ್ದೇ ಇರುತ್ತದೆ. ಬೇರೆಯವರ ಮಾತಿನಿಂದ ಬಹಳಷ್ಟು ಜನ ತಮ್ಮ ದೇಹದ ಮೇಲೆ ಜಿಗುಪ್ಸೆ ಹೊಂದುತ್ತಾರೆ. ಅದರ ಬಗ್ಗೆ ಹೆಮ್ಮೆ ಇರಬೇಕು. ನಮ್ಮ ದೇಹದ ಬಗ್ಗೆ ಕಾಳಜಿ ನಮಗಿರಬೇಕು. ಕೆಲವೊಮ್ಮೆ ದೇಹದಲ್ಲಿ ಆಗುವ ಹಾರ್ಮೋನ್ ಬದಲಾವಣೆಯಿಂದಲೂ, ದೇಹದ ಗಾತ್ರದಲ್ಲಿ ವ್ಯತ್ಯಾಸಗಳಾಗುತ್ತವೆ. ನಮ್ಮ ದೇಹದ ಸ್ಥಿತಿಗತಿಗಳ ಮೇಲೆ ಪರಿಣಾಮ ಬೀರುತ್ತದೆ.

ಪ್ರತಿಯೊಬ್ಬರ ಬದುಕು ಹರಿಯುವ ನೀರಂತೆ. ದಿನಗಳೆದಂತೆ ದೇಹದಲ್ಲಿ ಬದಲಾವಣೆ ಸಹಜ. ಹುಟ್ಟಿದ ದಿನದಿಂದ ಸಾಯುವವರೆಗೂ ದೇಹದಲ್ಲಿ ಬದಲಾವಣೆ ನಿರಂತರ. ಇದು ಪ್ರಕೃತಿಯ ನಿಯಮ ಕೂಡ. ನಮ್ಮ ಬಗ್ಗೆ ಹಾಗೂ ನಮ್ಮ ದೇಹದ ಬಗ್ಗೆ ನಮಗೆ ಮೊದಲು ಗೌರವವಿರಬೇಕು. ಬೇರೆಯವರ ಟೀಕೆಗೆ ಕೊನೆ ಮೊದಲೆಂಬುದಿಲ್ಲ. ನಮ್ಮ ಬಗ್ಗೆ ನಾವೇ ನಾಚಿಕೆ ಪಟ್ಟುಕೊಳ್ಳುವುದು ನ್ಯಾಯವೇ? ನಮ್ಮ ದೇಹ ಮತ್ತು ಮನಸ್ಸು ಆರೋಗ್ಯವಾಗಿಟ್ಟುಕೊಳ್ಳುವುದು ಮಾತ್ರ ನಮ್ಮ ಕರ್ತವ್ಯ. ನಿಯಮಿತ ವ್ಯಾಯಾಮ ಮಾಡುವುದರಿಂದ ನಮ್ಮ ದೇಹ ಮತ್ತು ಮನಸ್ಸು ಎರಡು ಕ್ರಿಯಾತ್ಮಕವಾಗಿ ಇರುತ್ತದೆ. ನಮ್ಮ ದೇಹ ಹೇಗಿದಿಯೋ ಹಾಗೆ ಅದನ್ನು ಒಪ್ಪಿಕೊಳ್ಳಬೇಕು. ಮನಸ್ಸು ದೃಢವಾಗಿದ್ದರೆ ಬೇರೆಯವರಿಗೆ ಕಿವಿಗೊಡುವುದಿಲ್ಲ.

ನಿಜವಾದ ಸೌಂದರ್ಯವು ಪ್ರತಿಯೊಬ್ಬರ ಮನಸ್ಸಿನಲ್ಲಿದೆ. ಮನಸ್ಸು ನಿರ್ಮಲವಾಗಿ ಶಾಂತವಾಗಿದ್ದರೆ ದೇಹದ ಮೇಲೆ ಅದರ ಪರಿಣಾಮವನ್ನು ತೋರಿಸುತ್ತದೆ. ಎಲ್ಲೋ ಓದಿದ/ಕೇಳಿದ ನೆನಪು. ಚಿಕ್ಕ ಹುಡುಗಿಯೊಬ್ಬಳು (ನಟಿ) ತಾನು ಸಣ್ಣಗಾಗಬೇಕೆಂದು ಆಸ್ಪತ್ರೆಗೆ ಸೇರಿ ಪ್ರಾಣ ಕಳೆದುಕೊಂಡ ವಿಷಯ ಬಹಳ ವಿಷಾದನೀಯ. ದೇಹ ಮತ್ತು ಮನಸ್ಸಿನ ಫಿಟ್ನೆಸ್‌ಗಾಗಿ ನಗುವೆಂಬ ಆಭರಣವನ್ನು ಧರಿಸಿದರೆ ಸಾಕು. ಸೌಂದರ್ಯವೆನ್ನುವುದು ದೇಹದ ಆಕಾರದಲ್ಲಿಲ್ಲ, ಪ್ರತಿಯೊಬ್ಬರ ಮನಸ್ಸಿನಲ್ಲಿದೆ. ನಮ್ಮ ದೇಹದ ಬಗ್ಗೆ ನಮಗೆ ಹೆಮ್ಮೆ ಇರಲಿ.




ಸಂಧ್ಯಾ ನಾಗರಾಜ್
9980224796


## ಸಾಮಾನ್ಯರ ಅಸಾಮಾನ್ಯ ಮಾನವೀಯತೆ

ನಮ್ಮ ದಿನನಿತ್ಯದ ಅಗತ್ಯಗಳನ್ನು ಪೂರೈಸುವ ಇಬ್ಬರು ವ್ಯಕ್ತಿಗಳ ಬಗ್ಗೆ ನನ್ನ ಅನಿಸಿಕೆ ಬರೆಯುತ್ತಿದ್ದೇನೆ. ಈ ಲೇಖನದ ಮೂಲಕ ನನ್ನ ಕೃತಜ್ಞತೆ ಹಾಗೂ ಗೌರವಪೂರ್ಣ ವಂದನೆಗಳನ್ನು ತಿಳಿಸುತ್ತಿದ್ದೇನೆ.

ಮೊದಲನೆಯದಾಗಿ ಶ್ರೀ ಉದಯ್‌ರವರು ನನ್ನ ಪ್ರತಿ ನಿತ್ಯದ ಓಡಾಟಕ್ಕೆ, ಹೊರಗಡೆಯ ಕೆಲಸಗಳನ್ನು ನಿರ್ವಹಿಸಲು, ಸಭೆ–ಸಮಾರಂಭಗಳಿಗೆ ಹೋಗಲು ಸಹಾಯ ಮಾಡುವ ಆಟೋ ಚಾಲಕರು. ನನಗೆ ಸ್ವಲ್ಪ ಕಾಲಿನ ತೊಂದರೆ ಇರುವುದರಿಂದ ಇವರ ಸಹಾಯ ನನಗೆ ತುಂಬಾ ಅವಶ್ಯಕವಾಗಿದೆ. ತರಕಾರಿ, ಮನೆಗೆ ಬೇಕಾದ ವಸ್ತುಗಳಿಂದ ಎಲ್ಲವನ್ನೂ ನನಗೆ ಅವಶ್ಯಕವೆನಿಸಿದಾಗ ತಂದುಕೊಡುವ ದೊಡ್ಡಗುಣ ಇವರಲ್ಲಿದೆ. ಅವರು ವೃತ್ತಿಯಲ್ಲಿ ಎಲೆಕ್ಟ್ರಿಶಿಯನ್ ಆದರೂ ಸಹ ನನ್ನ ಎಲ್ಲಾ ಕರೆಗಳಿಗೂ ಅವರು ಸ್ಪಂದಿಸುತ್ತಾರೆ. ನನ್ನ ಓಡಾಟದ ಪರಿಚಯ ಅವರಿಗಿರುವುದರಿಂದ ನನಗೆ ಅವರು ಸಮಯಕ್ಕೆ ತಕ್ಕಂತೆ ಸಹಾಯ ಹಸ್ತ ನೀಡುತ್ತಾರೆ. ಇದಕ್ಕೆ ನಾನು ಹಣ ನೀಡಬಹುದು, ಆದರೆ ಅವರ ಸಹಾಯಕ್ಕೆ ಮತ್ತು ಮಾನವೀಯತೆಗೆ ಏನೂ ಕೊಡಲು ಸಾಧ್ಯವೇ ಇಲ್ಲ. ಇದಕ್ಕೆ ಅವರಿಗೆ ನನ್ನ ಗೌರವಯುತ ವಂದನೆಗಳು.

ಎರಡನೆಯದಾಗಿ ಶ್ರೀ ರಮೇಶ್‌ರವರು ನನಗೆ ಅಡುಗೆ ಅನಿಲವನ್ನು ಸರಬರಾಜು ಮಾಡುವವರು. ಸಾಮಾನ್ಯವಾಗಿ ಅಡುಗೆ ಅನಿಲ ಬರುವ ಸಮಯದಲ್ಲಿ ನಾನು ಕಛೇರಿಯಲ್ಲಿರುತ್ತೇನೆ. ಶ್ರೀ ರಮೇಶ್‌ರವರು ಅನಿಲ ಸರಬರಾಜು ಮಾಡುವ ದಿನ ಮುಂಚಿತವಾಗಿ ದೂರವಾಣಿ ಮೂಲಕ ತಿಳಿಸುತ್ತಾರೆ ಅಥವಾ ನಾನಿರುವ ವೇಳೆಯಲ್ಲಿ ಸರಬರಾಜು ಮಾಡುತ್ತಾರೆ. ನನ್ನ ಕಡೆಯಿಂದ ಯಾವ ತೊಂದರೆ ಇದೆಯೆಂದು ತಿಳಿದರೆ ತಕ್ಷಣವೇ ಅವರಿಂದ ಸಹಾಯ ಹಸ್ತ ಬರುತ್ತದೆ. ನನ್ನ ಕಡೆಯಿಂದ ಅವರಿಗೆ ಯಾವ ಸಹಾಯವೂ ಇಲ್ಲ, ಆದರೂ ಅವರ ಸೇವಾ ಮನೋಭಾವ ಶ್ಲಾಘನೀಯ. ಅವರಿಗೂ ನನ್ನ ಅನಂತಾನಂತ ಕೃತಜ್ಞತೆಗಳು ಹಾಗೂ ವಂದನೆಗಳು.




ಬಿ.ಪಿ.ಸರಸ್ವತಿ
7760634277

# ಸರ್ವ ಸದಸ್ಯರ ಸಭೆ – 2021-22

ಛಾಯಾಚಿತ್ರಗಳು : ಕೆ.ಸಿ. ನಟರಾಜನ್ & ಅರ್ಜುನ್ ದೇಶಪಾಂಡೆ















# ಸರ್ವ ಸದಸ್ಯರ ಸಭೆ - 2021-22

ಛಾಯಾಚಿತ್ರಗಳು : ಕೆ.ಸಿ. ನಟರಾಜನ್ & ಅರ್ಜುನ್ ದೇಶಪಾಂಡೆ

















# 75 ವರ್ಷಗಳನ್ನು ಪೂರೈಸಿದ ಹಿರಿಯ ಚೇತನರಿಗೆ ಗೌರವ

ಛಾಯಾಚಿತ್ರಗಳು : ಕೆ.ಸಿ. ನಟರಾಜನ್ & ಅರ್ಜುನ್ ದೇಶಪಾಂಡೆ



ಶ್ರೀ ಕೆ. ನಟರಾಜನ್ ಮತ್ತು ಶ್ರೀಮತಿ ಜ್ಯೋತಿ
ಶ್ರೀ ಎಸ್. ವಿಜಯ್ ದೇವ್ ಮತ್ತು ಶ್ರೀಮತಿ ಸರಸ್ವತಿ



ಶ್ರೀ ಹೆಚ್.ಜಿ. ಅಶ್ವತ್ಥನಾರಾಯಣ ಮತ್ತು ಶ್ರೀಮತಿ ಹೆಚ್.ಎ. ಪದ್ಮಿನಿ



ಶ್ರೀಮತಿ ತಂಗಮಣಿ ಮತ್ತು ಶ್ರೀ ಆರ್.ಎಸ್. ಪದ್ಮನಾಭನ್



ಶ್ರೀ ಹೆಚ್.ಪಿ. ಶ್ರೀನಿವಾಸ್ ಮತ್ತು ಶ್ರೀಮತಿ ಸರ್ವಮಂಗಳ
ಶ್ರೀಮತಿ ಲಲಿತಾ ಮತ್ತು ಶ್ರೀ ಆರ್.ಎನ್. ವೆಂಕಟ ಸುಬ್ಬರಾವ್



ಶ್ರೀಮತಿ ನಾಗರತ್ನಮ್ಮ ಡಿ.ಸಿ., ಶ್ರೀಮತಿ ಪ್ರಕೃತಿ ದೇವಿ,
ಶ್ರೀಮತಿ ಆರ್. ರಾಜಲಕ್ಷ್ಮೀ



ಶ್ರೀ ಎಸ್. ಶ್ರೀನಿವಾಸಯ್ಯ



ಶ್ರೀಮತಿ ರುಕ್ಮಿಣಿ

## ಸರ್ವ ಸದಸ್ಯರ ಸಭೆಯಲ್ಲಿ ಒಂದೇ ಕುಟುಂಬದ ಮೂರು ಪೀಳಿಗೆಯ ಛಾಯಾಗ್ರಾಹಕರು



# ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು - 3.7.2022

ಛಾಯಾಚಿತ್ರಗಳು : ಕೆ.ಸಿ. ನಟರಾಜನ್ & ಅರ್ಜುನ್ ದೇಶಪಾಂಡೆ




ಪೂಜಾ ಆರ್.ಎಂ., ಸಾಯಿ ಶ್ರುತಿ ಎನ್,
ಶಶಾಂಕ್ ಆರ್. ಆದಿತ್ಯರಾಮ್ ಎಸ್.ಪಿ., ವಿವೇಕ್ ಎನ್.




ಶ್ರೇಯಾ ಆರ್, ಗಗನ್ ಎಂ, ದಿಶಾ ಆರ್,
ಅಕ್ಷಯ್ ಕಶ್ಯಪ್, ಶರಣ್ಯಾ ಸಿ.ಎಸ್.




ಸುಪ್ರೀತಾ ಕೆ, ಶ್ರೇಯಸ್ ವಿ, ರಾಘವ್ ಬಿ,
ಶರ್ವಾಣಿ ವಿಶ್ವನಾಥ್




ನಿಧಿ ಪ್ರದೀಪ್




ಧ್ರುವ ಎಸ್, ಸಾಯಿ ಸತ್ಯನಾರಾಯಣ ಬಿ.ಕೆ.,
ಅಪೂರ್ವ ಎಮ್, ಶ್ರೇಯಸ್ ಆರ್.ಎಸ್., ಬೃಂದಾ ಆರ್.ಎಸ್.




ರಕ್ಷಾ ಉಮಾಶಂಕರ್, ಪೂರ್ವಿ ಪ್ರಸಾದ್,
ಹರ್ಷಿತಾ ವಿಶ್ವೇಶ್, ಬಿಂದು ಎಮ್, ಶ್ರೇಯಸ್ ವಿ




ರಾಘವ್ ಬಿ, ಜ್ಯೋತ್ಸ್ನಾ ಎಸ್, ಶಶಾಂಕ್ ಆರ್,
ಆದಿತ್ಯರಾಮ್ ಎಸ್.ಪಿ., ವಿವೇಕ್ ಎನ್.




ಸಾಯಿ ಶ್ರುತಿ ಎನ್, ಪೂಜಾ ಆರ್.ಎಮ್, ಶ್ರೇಯಾ ಆರ್

# ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು - 3.7.2022

ಛಾಯಾಚಿತ್ರಗಳು : ಕೆ.ಸಿ. ನಟರಾಜನ್ & ಅರ್ಜುನ್ ದೇಶಪಾಂಡೆ


ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ (ರಿ)

[ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ]

27/1, ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು-560 004

ಪ್ರಶಂಸಾ ಪತ್ರ

ಚಿ|| ಶ್ರೇಯಾ ಕಶ್ಯಪ್

ಅವರು 2021ರಲ್ಲಿ ನಡೆದ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರನ್ನು ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ಅಭಿನಂದಿಸುತ್ತಾ, ಇವರಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತದೆ.

ಬೆಂಗಳೂರು
ದಿನಾಂಕ: 03-07-2022

ಶ್ರೀನಿವಾಸ ಎಸ್. ಸಿ.
ಕಾರ್ಯದರ್ಶಿ

ಸುಬ್ರಹ್ಮಣ್ಯಂ ಬಿ.
ಅಧ್ಯಕ್ಷರು




ವಿಶ್ವಾಸ್ ಎನ್, ಭಾರ್ಗವ್ ಆರ್.ಎಸ್., ಪೂಜಾ ಉಮಾಶಂಕರ್, ರಶ್ಮಿ ಆರ್, ವಾಣಿಶ್ರೀ, ಅರ್ಜುನ್ ದೇಶಪಾಂಡೆ




ಡಾ ಮೇಘನಾ ಬಿ. ನಾರಾಯಣ್, ಶ್ರೀಲಕ್ಷ್ಮೀ ಎ.ಕೆ., ಸೌಂದರ್ಯ ಎಸ್, ಡಾ ಅಶಿತಾ ಎಮ್.ಎಸ್., ಸಾಯಿ ಸಿಂಧೂರ ಬಿ.ಕೆ., ದೀಪ್ತಿ ವೆಂಕಟೇಶ್




ಪ್ರಣವಿ ಜಿ, ಸಮಾಹಿತ ಎಸ್, ಪ್ರಿಯಾ ದೇಶಪಾಂಡೆ



ಶ್ರೀಮತಿ ಸುಧಾ ಮತ್ತು ಶ್ರೀ ಆರ್.ಪಿ.ರವಿಶಂಕರ್

ಶಾಸ್ತ್ರೀಯ ಸಂಗೀತ ಪ್ರತಿಭಾವಂತರನ್ನು ಪುರಸ್ಕರಿಸಿದ ಘಟ ವಿದ್ವಾನ್ ಶ್ರೀ ಆರ್.ಪಿ. ರವಿಶಂಕರ್‌ರವರು ಸರ್ವ ಸದಸ್ಯರ ಸಭೆಯಲ್ಲಿ ಸನ್ಮಾನಿತರಾದ ಸಂದರ್ಭ



ಸಂಘದ ಪದಾದಿಕಾರಿಗಳು ದಿನಾಂಕ 17.7.2022 ರಂದು ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಬಾಣಸಿಗರಿಗೆ ವಸ್ತ್ರ ವಿತರಿಸಿದ ಸಂದರ್ಭ.

**ಅಭಿನಂದನೆಗಳು**



ಸದಸ್ಯೆ ಶ್ರೀಮತಿ ದೀಪ್ತಿ ವೆಂಕಟೇಶ್‌ರವರು ಅಮೇರಿಕದಲ್ಲಿರುವ ಅಟ್ಲಾಂಟಾದ "ಜಾರ್ಜಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಯಿಂದ "ಕಂಪ್ಯೂಟರ್ ಸೈನ್ಸ್" ನಲ್ಲಿ ಎಂ.ಎಸ್. ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.

**ಸಂಘವು ಶ್ರೀಮತಿ ದೀಪ್ತಿರವರಿಗೆ ಶುಭ ಹಾರೈಸುತ್ತದೆ.**

**ಅಭಿನಂದನೆಗಳು**




ಸದಸ್ಯೆ ತಾರಾ ರವೀಂದ್ರರವರ ಸೊಸೆ ಹಾಗೂ ಸಂಘದ ಹಿತೈಷಿ ಡಾ॥ ಭಾರ್ಗವ ಕಶ್ಯಪ್‌ರವರ ಪತ್ನಿ ಶ್ರೀಮತಿ ಡಾ॥ ಅಶಿತಾ ಎಂ.ಎಸ್.ರವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಆಯುರ್ವೇದದ "ರೋಗ ನಿದಾನ ಹಾಗೂ ವಿಕೃತಿ ವಿಜ್ಞಾನ" ವಿಭಾಗದಲ್ಲಿ ಎಂ.ಡಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿರುತ್ತಾರೆ.

**ಸಂಘವು ಡಾ॥ ಅಶಿತಾರವರಿಗೆ ಶುಭ ಹಾರೈಸುತ್ತದೆ.**

**ಅಭಿನಂದನೆಗಳು**



ಸದಸ್ಯ ಶ್ರೀ ಹೆಚ್.ಆರ್. ಬದರಿನಾರಾಯಣ ಮತ್ತು ಶ್ರೀಮತಿ ವಾಗ್ದೇವಿರವರ ಪುತ್ರಿ ಡಾ॥ ಮೇಘನಾ ಬಿ ನಾರಾಯಣ್‌ರವರು "ಅರಿವಳಿಕೆ" ವಿಭಾಗದಲ್ಲಿ ಎಂ.ಡಿ. ಸ್ನಾತಕೋತ್ತರ ಪದವಿಯನ್ನು ಶ್ರೇಷ್ಠ ದರ್ಜೆಯೊಂದಿಗೆ ಪಡೆದಿರುತ್ತಾರೆ.

**ಸಂಘವು ಡಾ॥ ಮೇಘನಾರವರಿಗೆ ಶುಭ ಹಾರೈಸುತ್ತದೆ.**

**ಅಭಿನಂದನೆಗಳು**




ಪೋಷಕ ವಿ.ನರೇಂದ್ರ ಮತ್ತು ಶ್ರೀಮತಿ ಸುಧಾರವರ ಪುತ್ರಿ ಕುಮಾರಿ ಹರ್ಷಿತಾ ನರೇಂದ್ರರವರು ಚಿಕಿತ್ಸಕ ಮನೋವಿಜ್ಞಾನದಲ್ಲಿ ಎಂ.ಎಸ್.ಸಿ. ಮತ್ತು ಎಂ.ಫಿಲ್ ನಂತರ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಮನೋವಿಜ್ಞಾನದ ಚಿಕಿತ್ಸಕರಾಗಿದ್ದಾರೆ. ಪಬ್ಲಿಕ್ ಟಿವಿಯ "ವಿದ್ಯಾಪೀಠ" ಎಂಬ ಕಾರ್ಯಕ್ರಮದಲ್ಲಿ ಪೋಷಕರು ಮತ್ತು ಮಕ್ಕಳ ನಡುವೆ ಇರುವ ಸಂಬಂಧದ ಬಗ್ಗೆ ಚರ್ಚಿಸಿ ತಿಳಿಹೇಳಿದರು. ಈ ಚರ್ಚಾ ಕಾರ್ಯಕ್ರಮವು ಪಬ್ಲಿಕ್ ಟಿವಿಯ ಯೂಟ್ಯೂಬ್‌ನಲ್ಲಿ ಪ್ರಕಟವಾಗಿದ್ದು, ಏಳು ಲಕ್ಷಕ್ಕೂ ಮೀರಿದ ವೀಕ್ಷಣೆಗಳನ್ನು ಪಡೆದಿದೆ.

ಕುಮಾರಿ ಹರ್ಷಿತಾರವರು ಭಾರತೀಯ ಸಾಮಗಾನ ಸಭಾದವರು ಸ್ವಾತಂತ್ರ ಅಮೃತೋತ್ಸವದ ಅಂಗವಾಗಿ ದಿನಾಂಕ 14.8.2022ರಂದು ಹಮ್ಮಿಕೊಂಡಿದ್ದ "ಸಂಸ್ಕೃತ ಸಂಗೀತಮ್" ಎಂಬ ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು.

**ಸಂಘವು ಕುಮಾರಿ ಹರ್ಷಿತಾರವರಿಗೆ ಶುಭ ಹಾರೈಸುತ್ತದೆ.**

**ಅಭಿನಂದನೆಗಳು**



ನಮ್ಮ ಸಂಘದ ಸದಸ್ಯರಾದ ಶ್ರೀಮತಿ ಶಿಲ್ಪ ಮತ್ತು ಶ್ರೀ ಶ್ರೀನಿವಾಸ್ ದಂಪತಿಯ ಸುಪುತ್ರಿ ಕೃಷ್ಣನ್ ಶ್ರೀನಿವಾಸ್ ಅವರು ತಮ್ಮ ಅಂತಿಮ ವರ್ಷದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಮತ್ತು ಇಂಟರ್ನ್‌ಶಿಪ್ ಅನ್ನು ಡೀಪ್ ಆರ್ಮರ್ ಎಂಬ ಸೈಬರ್ ಭದ್ರತಾ ಸಂಸ್ಥೆಯಲ್ಲಿ ಕ್ಲೌಡ್ ಸೆಕ್ಯುರಿಟಿ ಎಂಬ ವಿಷಯದ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಜೂನ್ ತಿಂಗಳ 2 ಹಾಗೂ 3ರಂದು ಸ್ವೀಡನ್‌ನ ಗೋಥೆನ್‌ಬರ್ಗ್‌ನಲ್ಲಿ ನಡೆದ ಸಮ್ಮೇಳನದಲ್ಲಿ, ಕ್ಲೌಡ್ ಸೆಕ್ಯುರಿಟಿ ಎಂಬ ವಿಷಯದ ಬಗ್ಗೆ ಮಾತನಾಡಲು ಕೃಷ್ಣನ್ ಶ್ರೀನಿವಾಸ್ ಹಾಗೂ ಅವರ ಸಹಪಾಠಿಯನ್ನು ಆಹ್ವಾನಿಸಲಾಗಿತ್ತು. ಆ ಸಮ್ಮೇಳನದಲ್ಲಿ ಅವರು ಭಾಗವಹಿಸಿ ಅತ್ಯುತ್ತಮವಾಗಿ ತಮ್ಮ ವಿಚಾರಗಳನ್ನು ಮಂಡಿಸಿದರು ಹಾಗೂ ಎಲ್ಲರ ಮೆಚ್ಚುಗೆಯನ್ನು ಗಳಿಸಿರುತ್ತಾರೆ.

**ಸಂಘವು ಕುಮಾರಿ ಕೃಷ್ಣನ್‌ರವರಿಗೆ ಶುಭ ಹಾರೈಸುತ್ತದೆ.**

## ಅಭಿನಂದನೆಗಳು



ಸಂಘದ ಪೋಷಕ ಹಾಗೂ ಲೆಕ್ಕ ಪರಿಶೋಧಕ ಮತ್ತು ಸದಸ್ಯ ಶ್ರೀ ಬಿ.ಎನ್.ಜಿ.ಕುಮಾರ್ ಮತ್ತು ಶ್ರೀಮತಿ ಕಾವೇರಿ ಕುಮಾರ್‌ರವರ ಪುತ್ರಿ ಕುಮಾರಿ ಸಾಯಿ ಸಿಂಧೂರರವರು ನಮ್ಮ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿರವರು ಶಂಖುಸ್ಥಾಪನೆ ನೆರವೇರಿಸಿದ ಕಬ್ಬನ್ ಉದ್ಯಾವನದ "ಸುರಂಗ ಮತ್ಸ್ಯಾಲಯ" ಕಾರ್ಯಕ್ರಮದಲ್ಲಿ ನಿರೂಪಣೆಯನ್ನು ನಡೆಸಿಕೊಟ್ಟರು. ಈ ನಿರೂಪಣೆಗೆ ಬೇಕಾದ ವಿಚಾರಗಳನ್ನು ಸಿದ್ಧಪಡಿಸುವುದರಲ್ಲಿ ನಮ್ಮ ಸಂಘಕ್ಕೆ ನೂತನ ಸದಸ್ಯರಾದ ಶ್ರೀಮತಿ ದಿವ್ಯಾ ವಿ. ರವಿಶಂಕರ್‌ರವರು ನೆರವಾದರು.

**ಸಂಘವು ಕುಮಾರಿ ಸಾಯಿ ಸಿಂಧೂರ ಮತ್ತು ಶ್ರೀಮತಿ ದಿವ್ಯಾರವರಿಗೆ ಶುಭ ಹಾರೈಸುತ್ತದೆ.**

## ವಿವಾಹ



ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆರ್.ಗೋಪಾಲಕೃಷ್ಣ ಮತ್ತು ಸದಸ್ಯೆ ಶ್ರೀಮತಿ ಎಸ್.ಸಿ.ಪರಿಮಳರವರ ಪುತ್ರಿ ಚಿ.ಸೌ. ಸುಮನ್‌ರವರ ವಿವಾಹವು ಶ್ರೀ ಚಂದ್ರಶೇಖರ ನಾಡಿಗ್ ಮತ್ತು ಶ್ರೀಮತಿ ಜಿ.ಎನ್. ಉಷಾರವರ ಪುತ್ರ ಚಿ.ರಾ. ಭರತ್‌ರವರೊಂದಿಗೆ ದಿನಾಂಕ 11.5.2022 ರಂದು ಬೆಂಗಳೂರಿನಲ್ಲಿ ನೆರವೇರಿತು.

* * *



ಸಂಘದ ಉಪಾಧ್ಯಕ್ಷ ಶ್ರೀ ಹೆಚ್.ಕೆ.ಶಶಿಧರ್‌ರವರ ಸೋದರಿ ಹಾಗೂ ಸದಸ್ಯೆ ಶ್ರೀಮತಿ ಸಂಧ್ಯಾ ನಾಗರಾಜ್ ಮತ್ತು ಶ್ರೀ ಎಂ.ಆರ್. ನಾಗರಾಜ್ ದಂಪತಿಗಳ ಪುತ್ರ ಚಿ.ರಾ. ಸುಪ್ರೀತ್‌ರವರ ವಿವಾಹವು ಶ್ರೀಮತಿ ಮತ್ತು ಶ್ರೀ ಬಿ.ಎಸ್. ಸೋಮಸುಂದರ್‌ರವರ ಪುತ್ರಿ ಚಿ.ಸೌ. ಋತರವರೊಂದಿಗೆ ದಿನಾಂಕ 7.8.2022ರಂದು ಬೆಂಗಳೂರಿನಲ್ಲಿ ನೆರವೇರಿತು.

* * *



ಸದಸ್ಯರಾದ ಶ್ರೀ ಬಿ.ಇ. ರಮೇಶ್ ಮತ್ತು ಶ್ರೀಮತಿ ಶ್ರೀಲತಾ ದಂಪತಿಗಳ ಪುತ್ರಿ ಚಿ.ಸೌ. ಡಾ. ಶ್ರೀಪ್ರೀತರವರ ವಿವಾಹವು ಶ್ರೀಮತಿ ಕಾಮಾಕ್ಷಿ ಮತ್ತು ಶ್ರೀ ಶಿವಣ್ಣರವರ ಪುತ್ರ ಚಿ.ರಾ. ಡಾ. ರಾಘವೇಂದ್ರರವರೊಂದಿಗೆ ದಿನಾಂಕ 15.8.2022ರಂದು ಬೆಂಗಳೂರಿನಲ್ಲಿ ನೆರವೇರಿತು. ನೂತನ ದಂಪತಿಗಳು ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಧ್ವಜಾರೋಹಣವನ್ನು ನೆರವೇರಿಸಿದರು. ವಿಶ್ವ ಹಿಂದೂ ಪರಿಷತ್‌ನಿಂದ ಸ್ಥಾಪನೆಗೊಂಡಿರುವ "ಧರ್ಮ ರಕ್ಷಾ ನಿಧಿ"ಗೆ ಈ ಶುಭ ಸಂದರ್ಭದಲ್ಲಿ ನೂತನ ದಂಪತಿಗಳು ನಿಧಿ ಸಮರ್ಪಣೆ ಮಾಡಿದರು.

**ಸಂಘವು ನೂತನ ವಧು-ವರರಿಗೆ ಶುಭ ಹಾರೈಸುತ್ತದೆ.**

## ಅಭಿನಂದನೆಗಳು




ನಗರದ ರಾಜಾಜಿನಗರ ಬಡಾವಣೆಯಲ್ಲಿರುವ "ಅಂಕುರ್ ಹೆಲ್ತ್ ಕೇರ್" ಚಿಕಿತ್ಸಾಲಯ ಅನೇಕ ವರ್ಷಗಳಿಂದ ಬೆಂಗಳೂರು ನಿವಾಸಿಗಳಿಗೆ ವೈದ್ಯಕೀಯ ಸೇವೆಯನ್ನು ನೀಡುತ್ತಲಿದೆ. ಈ ಚಿಕಿತ್ಸಾಲಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಡಾ॥ ಎಸ್.ಎಸ್. ವಾಸನ್ ಅವರು ಈಗ ಇನ್ನೊಂದು ಉದಾತ್ತ ಯೋಜನೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ರಾಮನಗರದ ಜಿಲ್ಲಾ ಆಸ್ಪತ್ರೆ ಮತ್ತು ನಗರದ ಮಲ್ಲೇಶ್ವರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಸಂಕೀರ್ಣ ಅನಾರೋಗ್ಯ ಸಮಸ್ಯೆಗಳಿಂದ (Complex Health Issue ಗಳಿಂದ) ಬಳಲುವ ಪುರುಷರಿಗಾಗಿ ಹಾಗೂ ಮುಂಬರುವ ವ್ಯಾಧಿಗಳನ್ನು ತಡೆಗಟ್ಟುವ ಉದ್ದೇಶದಿಂದ ವಿಶೇಷ ಪೂರ್ವ ಪರಿಶೋಧನಾ ವೈದ್ಯಕೀಯ ಸೇವೆಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಿದ್ದಾರೆ.

ಪುರುಷರೇ ಆಧಾರವಾಗಿರುವ ಹೆಚ್ಚಿನ ಕುಟುಂಬಗಳಲ್ಲಿ ಹಲವಾರು ಮಂದಿ ಅಸಮರ್ಪಕ ಜೀವನ ಶೈಲಿಯಿಂದ ಉಂಟಾಗುವ ಮಧುಮೇಹ, ರಕ್ತದೊತ್ತಡದ ಏರುಪೇರು, ಮೂಳೆ ಸಂಬಂಧಿತ ಕಾಯಿಲೆಗಳು ನರದೌರ್ಬಲ್ಯ ಇವುಗಳಿಗೆ ತುತ್ತಾಗುತ್ತಾರೆ. ಇಂಥವರ ಆರೋಗ್ಯಕ್ಕೆ ಹೆಚ್ಚಿನ ಒತ್ತು ಕೊಡಬೇಕಾದ ಅವಶ್ಯಕತೆ ಇದೆ. ಇದನ್ನು ಸಾಧಿಸಿದಲ್ಲಿ ಮುಂದೆ ಸಂಭವಿಸಬಹುದಾದ ತೀವ್ರ ಅನಾರೋಗ್ಯದಿಂದ ಮತ್ತು ಅದರಿಂದಾಗುವ ಆರ್ಥಿಕ ಸಂಕಷ್ಟಗಳಿಂದ ಪರಿವಾರಗಳು ಪಾರಾಗಬಹುದು ಎಂಬುದು ಈ ಯೋಜನೆಯ ಹಿಂದಿರುವ ಸದುದ್ದೇಶ.

ಡಾ॥ ಎಸ್.ಎಸ್. ವಾಸನ್ ಅವರು ನಮ್ಮ ಬೃಹಚ್ಚರಣ ಸಂಘದ ಸದಸ್ಯರು ಹಾಗೂ ಸಮುದಾಯದ ಹಿರಿಯ ದಂಪತಿಗಳಾದ ದಿವಂಗತ ತಾರಾ ಮತ್ತು ಎಂ.ಎಸ್. ಸತ್ಯನಾರಾಯಣನ್‌ರವರ ಜ್ಯೇಷ್ಠ ಪುತ್ರ.

# ಶಂಕರ ಜಯಂತಿ



**ಶೃತಿ ಸ್ಮೃತಿ ಪುರಾಣಾನಾಂ ಆಲಯಂ ಕರುಣಾಲಯಂ।**
**ನಮಾಮಿ ಭಗವತ್ಪಾದಂ ಶಂಕರಂ ಲೋಕ ಶಂಕರಂ॥**

ಭಾರತದ ಆಧ್ಯಾತ್ಮಿಕ ಲೋಕದ ಮಹಾಚೇತನರಾದ ಆದಿಗುರು ಶ್ರೀ ಶಂಕರ ಭಗವತ್ಪಾದರು ಭಾರತೀಯ ಸಂಸ್ಕೃತಿ ಹಾಗೂ ಸನಾತನ ಧರ್ಮದ ಪುನರುತ್ಥಾನ ಮಾಡಿದ ಯತಿವರ್ಯರಾಗಿದ್ದಾರೆ. ಭರತಖಂಡದಲ್ಲಿ ಹಿಂದೂ ಧರ್ಮವು ಅನ್ಯಮತಗಳ ಪ್ರಭಾವದಿಂದ ಕ್ಷೀಣಿಸುತ್ತಿದ್ದಾಗ ಜನಿಸಿ ಹಿಂದೂ ಧರ್ಮವನ್ನು ಪುನರುದ್ಧಾರ ಮಾಡಿದ ಅವತಾರ ಪುರುಷರು ಶ್ರೀ ಶಂಕರಾಚಾರ್ಯರು.

ಅದ್ವೈತದರ್ಶನ, ವೇದಾಂತ ವಿಚಾರಗಳನ್ನು ಆಸೇತು ಹಿಮಾಚಲ ಪರ್ಯಂತ ಪ್ರಚಾರ ಮಾಡಿದ ಶ್ರೀ ಶಂಕರರು ಅದ್ವಿತೀಯ ಕಾರ್ಯವನ್ನು ಸಾಧಿಸಿದ್ದಾರೆ.

ವಿಶ್ವವೇ ಬೆರಗಾಗುವಂಥ ಅಧ್ಭುತ ಪ್ರತಿಭೆ, ಪಾಂಡಿತ್ಯಗಳನ್ನು ಗಳಿಸಿದ್ದ ಶ್ರೀ ಶಂಕರರು ವಿದ್ವತ್ತಿನ ಮೇರು ಶಿಖರವಾಗಿದ್ದರು. ಭಾರತದಲ್ಲಿ ಭಾರತೀಯ ವೇದಾಂತಕ್ಕೆ ಆದಿ ಗುರುಗಳು ನೀಡಿರುವ ಕೊಡುಗೆ ಅನುಪಮವಾದುದು. ಭಾರತೀಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಆದಿ ಶಂಕರರು ದಿವ್ಯ ಪ್ರತಿಭೆಯಾಗಿ ಕಂಗೊಳಿಸುತ್ತಿದ್ದಾರೆ.

ಸಾಕ್ಷಾತ್ ಕೈವಲ್ಯದಾಯಕನು ಹಾಗೂ ಕೈವಲ್ಯನಾಯಕನು ಆದ ಶ್ರೀ ಪರಶಿವನು ಜಗತ್ತಿನಲ್ಲಿಯ ದುಷ್ಕೃತ್ಯಗಳನ್ನು ಲಯಗೊಳಿಸಿ ಸನಾತನ ಧರ್ಮವನ್ನು ಸ್ಥಾಪಿಸಲು ಶ್ರೀ ಶಂಕರಾಚಾರ್ಯರ ರೂಪದಲ್ಲಿ ಅವತರಿಸಿದರು.

ಅಖಂಡ ಭಾರತದಲ್ಲಿ ಅತ್ಯಂತ ಚಿಕ್ಕವಯಸ್ಸಿನಲ್ಲಿ ಒಂದಲ್ಲ, ಎರಡು ಬಾರಿ ದಿಗ್ವಿಜಯ ಯಾತ್ರೆ ಕೈಗೊಂಡು ಆಮ್ನಾಯಪೀಠಗಳನ್ನು ಸ್ಥಾಪಿಸಿದ ಮಹಾನ್ ತತ್ವಜ್ಞಾನಿ. ಜಗದ್ಗುರು ಆದಿ ಶಂಕರಾಚಾರ್ಯರು ಮೂವತ್ತೆರಡು ವರ್ಷಗಳಿಗೆ ದಿವ್ಯಜ್ಯೋತಿ ಪುರುಷರಾಗಿ ಈ ಲೋಕದಿಂದ ನಿರ್ಗಮಿಸಿದರು.

ಈ ಸಂವತ್ಸರದ ವೈಶಾಖ ಶುದ್ಧ ಪಂಚಮಿಯಂದು ಇಂತಹ ದಿವ್ಯಚೇತನರ ಜಯಂತಿ ಸಂದರ್ಭದಲ್ಲಿ ಭಕ್ತಿ ಸಂಕೀರ್ತನ ಸಮಾರಂಭವನ್ನು ಯಶಸ್ವಿಯಾಗಿ ನಡೆಸಿದುದಕ್ಕಾಗಿ ಬೃಹಚ್ಚರಣ ಸಂಘಕ್ಕೆ ಹೆಮ್ಮೆ ಎನಿಸುತ್ತದೆ.



ಶ್ರೀ ಆದಿ ಶಂಕರ ಭಗವತ್ಪಾದರು ನಮ್ಮೆಲ್ಲರನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಎಸ್. ಸಿ. ಶ್ರೀನಿವಾಸ**
**9483725949**

**ಬೃಹಚ್ಚರಣ ಸಂಘವು ಬಸವನಗುಡಿಯ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಸಹಯೋಗದೊಂದಿಗೆ ದಿನಾಂಕ 6.5.2022ರ ಶುಕ್ರವಾರದಂದು ಆದಿಗುರು ಶ್ರೀ ಶಂಕರ ಭಗವತ್ಪಾದರ ಜಯಂತಿಯ ಸಲುವಾಗಿ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿತ್ತು ಸಂಘದ ಸದಸ್ಯೆ ಶ್ರೀಮತಿ ಶುಭಾ ಗಾಯತ್ರಿರವರು ಈ ಕಾರ್ಯಕ್ರಮ ನಿರೂಪಿಸಿದರು. ಇದರಲ್ಲಿ ಸಮುದಾಯದ ಕಲಾವಿದರಾದ ಶ್ರೀ ಶ್ರೀನಿವಾಸ್, ಶುಭಾ ಗಾಯತ್ರಿ, ವಾಣಿಶ್ರೀ, ಸುಹಾಸಿನಿ, ಶ್ರೀದೇವಿ, ಅರ್ಜುನ್, ಪ್ರಿಯ, ಸಮಾಹಿತರವರು ಸಂಗೀತ ಸೇವೆ ಸಲ್ಲಿಸಿದರು. ಇವರೊಂದಿಗೆ ಪಕ್ಕವಾದ್ಯದಲ್ಲಿ ತಬಲ– ಎ.ವಿ. ಲೋಕೇಶ್, ರಿದಮ್ ಪ್ಯಾಡ್–ಹರಿಶಂಕರ್ ಮತ್ತು ಕೀ ಬೋರ್ಡ್–ಕಾರ್ತಿಕ್ ಸಹಕರಿಸಿದರು, ಸಂಘದ ಹಿರಿಯ ಪೋಷಕ ಶ್ರೀ ಕೆ. ಗುಂಡಪ್ಪನವರು ಕಲಾವಿದರಿಗೆ ಸ್ಮರಣಿಕೆ ನೀಡಿ ಗೌರವಿಸಿದರು.**







## ಅಭಿನಂದನೆಗಳು

**ಸಂಘದ ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್ ಮತ್ತು ಶ್ರೀಮತಿ ಪದ್ಮಶ್ರೀರವರು ತಮ್ಮ 25ನೆಯ ವಿವಾಹ ವಾರ್ಷಿಕೋತ್ಸವವನ್ನು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಾ ದೇವಾಲಯದಲ್ಲಿ ಶತರುದ್ರಾಭಿಶೇಕವನ್ನು ನೆರವೇರಿಸುವ ಮೂಲಕ ಆಚರಿಸಿಕೊಂಡರು.**

**ಸಂಘವು ಶ್ರೀಮತಿ ಮತ್ತು ಶ್ರೀ ಶಶಿಧರ್ ದಂಪತಿಗಳಿಗೆ ಆಯುರಾರೋಗ್ಯ ಮತ್ತು ನೆಮ್ಮದಿ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

## ಜನನ



ಸದಸ್ಯೆ ಶ್ರೀಮತಿ ಪದ್ಮಜಾ ಶ್ರೀನಿವಾಸನ್‌ರವರ ಪುತ್ರ ಶ್ರೀ ಕಿರಣ್‌ಕುಮಾರ್ ಮತ್ತು ಶ್ರೀಮತಿ ಇಂದಿರಾ ದಂಪತಿಗಳಿಗೆ ತಾರೀಖು 1.7.2022ರಂದು ಬೆಂಗಳೂರಿನಲ್ಲಿ ಗಂಡು ಮಗು ಜನನವಾಯಿತು.

*******

ಸದಸ್ಯ ಶ್ರೀ ಎ. ಪ್ರವೀಣ್ ಮತ್ತು ಶ್ರೀಮತಿ ಸುಧಾ ದಂಪತಿಗಳಿಗೆ ತಾರೀಖು 14.8.2022ರಂದು ಬೆಂಗಳೂರಿನಲ್ಲಿ ಗಂಡು ಮತ್ತು ಹೆಣ್ಣು ಅವಳಿ ಮಕ್ಕಳ ಜನನವಾಯಿತು.

**ನವಜಾತ ಶಿಶುಗಳಿಗೆ ಆಯುರಾರೋಗ್ಯ ಹಾಗೂ ವಿದ್ಯೆಯು ಲಭಿಸಲೆಂದು ಸಂಘವು ಹಾರೈಸುತ್ತದೆ.**

## ಉಪನಯನ

ಪೋಷಕ ಶ್ರೀ ಆರ್. ವೆಂಕಟೇಶ್ ಪ್ರಸಾದ್ ಮತ್ತು ಶ್ರೀಮತಿ ಸಿ.ಆರ್. ನಾಗರತ್ನ ದಂಪತಿಗಳು ದಿನಾಂಕ 21.4.2022ರಂದು ಅವರ ಪುತ್ರ ಚಿ. ಉಜ್ವಲ್ ವೆಂಕಟೇಶ್ ಪ್ರಸಾದ್‌ನ ಉಪನಯನವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

**********

ಸದಸ್ಯೆ ಶ್ರೀಮತಿ ಹೇಮ ಕೀರ್ತಿಚಂದ್ರ ಮತ್ತು ಶ್ರೀ ಎಮ್.ಹೆಚ್. ಕೀರ್ತಿಚಂದ್ರ ದಂಪತಿಗಳು ದಿನಾಂಕ 8.5.2022ರಂದು ಅವರ ಪುತ್ರ ಚಿ. ದೃಪದ್ ಚಂದ್ರನ ಉಪನಯನವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

**********

ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎನ್. ಕೃಷ್ಣನ್ ರವರ ಮೊಮ್ಮಗ ಮತ್ತು ಸದಸ್ಯೆ ಶ್ರೀಮತಿ ವನಿತಾ ಮಂಜುನಾರಾಯಣ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಮಂಜುನಾರಾಯಣ್ ದಂಪತಿಗಳು ದಿನಾಂಕ 17.6.2022ರಂದು ಅವರ ಪುತ್ರ ಚಿ. ದಿಗ್ವಿಜಯ್‌ನ ಉಪನಯನವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

**ವಟುಗಳಿಗೆ ಸಂಘದ ಹೃತ್ಪೂರ್ವಕ ಆಶೀರ್ವಾದಗಳು.**



# ವಾರ್ಷಿಕ ನಿರ್ವಹಣಾ ವೆಚ್ಚ ನೀಡಿದ ಸದಸ್ಯರು

ಶ್ರೀಧರ್ ಆರ್.
ದಿವಾಕರ್ ರಾಮಚಂದ್ರನ್
ರಾಮಚಂದ್ರನ್ ಟಿ.ಎಲ್.
ವೆಂಕಟೇಶ ಮೂರ್ತಿ ಬಿ.ಎ.
ಶ್ರೀನಿವಾಸ್ ಹೆಚ್.ಪಿ.
ಪರಮೇಶ್ವರ್ ಹೆಚ್.ಎಸ್.
ಸರಸ್ವತಿ ಬಿ.ಪಿ.
ಬಾಲಸುಬ್ರಹ್ಮಣ್ಯಮ್ ಎಸ್.ಆರ್.
ಸಂಧ್ಯಾ ಬಿ.ಇ.
ಸತ್ಯನಾರಾಯಣ ಎಸ್.
ಮನೋಜ್ ಎಸ್.
ಸುಬ್ರಹ್ಮಣ್ಯಂ ಬಿ.
ಶ್ರೀನಿವಾಸ ಎಸ್.ಸಿ.
ಶರ್ಮ ಕೆ.ಬಿ.ಎಸ್.
ಭರತ್ ಶರ್ಮ
ಗಣೇಶ್ ಶ್ರೀಧರ್ ಆರ್.
ರೂಪಶ್ರೀ ಎಂ.
ಅಭಯ್ ಗಣೇಶ್
ಸುಬ್ರಹ್ಮಣ್ಯ ಎಸ್.ಜಿ.
ಗುಂಡಪ್ಪ ಕೆ.
ಲೀಲಾವತಿ ಜಿ.
ಗುರು ಪ್ರಸನ್ನ ಜಿ.
ವಿದ್ಯಾ ಪ್ರಸಾದ್
ನಾಗರತ್ನಮ್ಮ ಡಿ.ಸಿ.
ರಾಮಕೃಷ್ಣ ಸಿ.
ಶಂಕರ ಪ್ರಸಾದ್ ಬಿ.ಆರ್.
ಅಕ್ಷಯ್ ಆತ್ರೇಯ
ಮಂಜುನಾರಾಯಣ ಕೆ.
ವನಿತಾ ಮಂಜುನಾರಾಯಣ
ನಳಿನಿ ಎಸ್.
ರಾಜೇಶ್ವರಿ ಆರ್.
ನಾಗೇಶ
ಗೋವಿಂದ ಪ್ರಸಾದ್ ಬಿ.ಎನ್.
ಕುಮಾರ್ ಬಿ.ಎನ್.ಜಿ.
ಶ್ರೀರಾಮ್ ಬಿ.ಜಿ.

ರಮೇಶ್ ಆರ್.
ಲಲಿತಾ ರಮೇಶ್
ಚಂಪಕ್ ಟಿ.ಎಸ್.
ಅಶ್ವಿನ್ ಎ.ಎಸ್.
ವಿಜಯ್ ಎ.ಎಸ್.
ಭಗವಾನ್ ಆರ್.
ಸೂರ್ಯಕುಮಾರಿ ಎಚ್.ಪಿ.
ಉದಯ್ ಬಿ. ರಾಜಾಪುರ
ಅಜಯ್ ಆರ್.ಬಿ.
ಸಂಜಯ್ ರಾಜಾಪುರ
ಸೋಮಸುಂದರ ಎಸ್.
ಜಯಶ್ರೀ ಎಸ್.
ಚಂದ್ರಶೇಖರ್ ಎಸ್.
ರಘುನಂದನ ಎಸ್.
ಡಾ. ರಮಾದೇವಿ ಎಸ್.
ಶ್ರೀನಿವಾಸನ್ ಎ.ವಿ.
ನಟರಾಜ ಬಿ.ಸಿ.
ಗೌರಿ ಬಿ. ನಟರಾಜ
ಮಣಿ ವಿ.ಎಸ್.
ಮಾತಂಗ ಶೇಷಗಿರಿ
ಯಶೋದರ ಉಡುಪ
ವಿಜಯದೇವ್ ಎಸ್.
ವಾಸು ಎಸ್.
ಸತ್ಯಪ್ರಸಾದ್ ಎಸ್.ಆರ್.
ವೆಂಕಟಸುಬ್ಬಯ್ಯ ಕೆ.
ನಿರ್ಮಲಾ ಸುಧೀಂದ್ರ
ಸೂರ್ಯನಾರಾಯಣ ಬಿ.ಎಸ್.
ನಾಗಭೂಷಣ
ವಿಶ್ವನಾಥ್ ಎನ್.
ನಾರಾಯಣಸ್ವಾಮಿ ಕೆ.ಎಸ್.
ರಾಧಾಕೃಷ್ಣ ಎಸ್.ಆರ್.
ವೆಂಕಟ ಸುಬ್ಬರಾವ್ ಆರ್.ಎನ್.
ಉಮಾ ಎನ್. ಗೋವಿಂದ್
ರಾಧಾ ನಾಗಭೂಷಣ ಶಾಸ್ತ್ರಿ
ರಾಮಸ್ವರೂಪ ಟಿ.ಎಸ್.
ಪ್ರಕಾಶ್ ಎಸ್.
ಸುನಂದಾ ರತನ್

ಸದಾನಂದ ಹೆಚ್ ಕೆ.
ಚೇತನ್ ಎಚ್.ಕೆ.
ಭಾಸ್ಕರ್ ಡಿ.ಎಸ್.
ನಾಗವೇಣಿ ಭಾಸ್ಕರ್
ನಕುಲ್ ಭಾಸ್ಕರ್
ನಿತಿನ್ ಭಾಸ್ಕರ್
ಪೂರ್ಣಿಮಾ ಎಸ್.
ವಿಶ್ವನಾಥ ಶರ್ಮ ಎ.ಕೆ.
ಮಣಿ ಗುಂಜೂರ್
ರಘುನಂದನ್ ಎ.ಜಿ.
ಚಂದ್ರಶೇಖರ್ ಕೆ.
ರಮಾದೇವಿ ಕೆ.ಆರ್.
ರಾಘವ ಪ್ರಸಾದ್ ಎಸ್.ಸಿ.
ವೀಣಾ ಪ್ರಸಾದ್ ಎಸ್.ಸಿ.
ಮಂಜುಳಾ ಟಿ.ಆರ್.
ಶ್ರೀನಿವಾಸನ್ ಕೆ.ಎಸ್.
ಜಯರಾಮನ್ ಬಿ.ವಿ.
ಶೇಖರ್ ಕೆ.ಸಿ.
ಗೋಪಾಲಕೃಷ್ಣ ಆರ್.
ಪರಿಮಳಾ ಎಸ್.ಸಿ.
ಸೂರ್ಯನಾರಾಯಣ ಟಿ.ಪಿ.
ನಾಗಪದ್ಮ ಎಸ್.
ರಘು ಕುಮಾರ್ ಜಿ.
ಗಣಪತಿ ಆರ್.
ವೆಂಕಟೇಶ್ ಎಚ್.
ಬದರಿನಾರಾಯಣ ಎಚ್.ಆರ್.
ವಸಂತ ಬಿ.ಪಿ.
ವಿಜಯಕುಮಾರ್ ಎಸ್.ಆರ್.
ವೆಂಕಟೇಶ್ ಆರ್.ಎಸ್.
ಮುತ್ತುಸ್ವಾಮಿ ಜಿ.
ನರಸಿಂಹ ವಿ.
ವಿಶ್ವಾಸ್ ಎನ್.
ಸುಮನ್ ಜಿ. ಕೃಷ್ಣ
ಅರುಣ್ ಕೆ.ಎಸ್.
ಅನಂತ ಕೆ.ಎಸ್.
ವೇಣುಗೋಪಾಲ್ ಹೆಚ್.ಪಿ.

## ನಾಗರಕಟ್ಟೆ ಸುರಕ್ಷಣಾ ತಡೆಗೆ ದೇಣಿಗೆ ನೀಡಿದ ಸದಸ್ಯರು/ದಾನಿಗಳು

ಛಾಯಪತಿ ವಿ.
ರಮೇಶ್ ಆರ್.ಎಸ್.
ಗಣೇಶ ಶ್ರೀಧರ್ ಆರ್
ರವಿಶಂಕರ್ ಜಿ.ಎಸ್.
ವಿಶ್ವನಾಥ್ ಎನ್.
ಸುಬ್ರಮಣ್ಯ ಎಸ್.ಜಿ
ರವಿಶಂಕರ್ ಎಂ.ಆರ್.
ಶ್ರೀನಿವಾಸ ಎಸ್.ಸಿ.
ಡಾ. ಸ್ವಾಮಿನಾಥ್ ಜಿ.
ಗಣೇಶ್ ಎಚ್.ಡಿ.
ರಘುಕುಮಾರ್ ಜಿ.
ಉಮಾ ಎನ್. ಗೋವಿಂದ್
ಸರೋಜಾ ಕೆ.ಎಲ್.
ನಾಗರಾಜ್ ಕೆ.ಟಿ.
ನರೇಂದ್ರ ವಿ.
ಅಜಯ್ ಕುಮಾರ್ ಎನ್
ಸರಸ್ವತಿ ಬಿ.ಪಿ.
ಸತ್ಯ ಮೂರ್ತಿ ಜಿ.ಎಸ್.
ಬಾಲಸುಬ್ರಮಣ್ಯಂ ಎಸ್.ಆರ್.
ಗೋವಿಂದರಾಜು ಡಿ.ಎಸ್.
ನರಸು ರಾಮಚಂದ್ರ
ಅಟ್ಟೂರು ರಾಮಕೃಷ್ಣ ಶರ್ಮ
ಸತ್ಯನಾರಾಯಣ ಎಂ.ಆರ್.
ಗೋವಿಂದ್ ಬಿ.ಇ.
ಚಂದ್ರಶೇಖರಯ್ಯ ಎನ್.
ಗುಂಡೂರಾವ್ ವಿ.ಎನ್.
ವಿಜಯಕುಮಾರ್ ಎಸ್.ಆರ್
ವಾಸು ಎನ್.ಎಸ್
ನೇತ್ರಾನಂದ ಟಿ.ಆರ್.
ಪದ್ಮನಾಭನ್ ಆರ್.ಎಸ್.
ವಿಶ್ವಾಸ್ ಆರ್.ಎಚ್.
ರವಿಶಂಕರ್ ಎಸ್.
ನಾಗೇಶ
ಪದ್ಮನಾಭನ್
ಸಂಧ್ಯಾ ಬಿ.
ದಕ್ಷಿಣಾಮೂರ್ತಿ ಆರ್.ಎ.
ಶ್ರೀಧರ ಮೂರ್ತಿ ಬಿ.ಪಿ.
ನಿರ್ಮಲಾ ಸುಧೀಂದ್ರ
ಸುನಂದಾ ರತನ್
ಮಹೇಶ್ ಆರ್.ಎಸ್.
ಶೇಷಾದ್ರಿ ಬಿ.ವಿ.
ವೆಂಕಟೇಶ್ ಪ್ರಸಾದ್ ಆರ್.
ಸರಸ್ವತಿ ಕೆ.
ಶ್ಯಾಮಸುಂದರ್ ಆರ್.ಎ.
ಶ್ರೀಕಾಂತ್ ಆರ್.ಎ.
ಈಶ್ವರನ್ ಆರ್.
ಸುಬ್ರಮಣ್ಯಂ ಬಿ.
ರಮೇಶ್ ಆರ್.
ವೆಂಕಟಸುಬ್ಬರಾವ್ ಆರ್.ಎನ್.
ಸತ್ಯನಾರಾಯಣ ಎಸ್.
ಮನೋಜ್ ಎಸ್
ಶರ್ಮ ಕೆ.ಬಿ.ಎಸ್.
ಗಣೇಶ್ ರಾಮು ಎ.ವಿ.
ಸುಬ್ರಮಣ್ಯಂ ಎಸ್.ಎಲ್.
ಸುರೇಶ್ ಕೆ.ಬಿ.
ಶ್ರೀಧರ್ ರಾಮಚಂದ್ರನ್
ಸೋಮಸುಂದರ ಎಸ್.
ಚಂದ್ರಶೇಖರ್ ಎಸ್.
ರಘುನಂದನ ಎಸ್.
ಡಾ. ರಮಾದೇವಿ ಎಸ್.
ಸೂರ್ಯನಾರಾಯಣ ಬಿ.ಎಸ್.
ನಾಗಪದ್ಮ ಎಸ್.
ದಾನಪ್ಪ ಮತ್ತು ಅಮ್ಮಯ್ಯಮ್ಮ ಮತ್ತು ಕುಟುಂಬ
ಸೀತಾಲಕ್ಷ್ಮಿ ಬಿ.ಇ.
ಶ್ರೀನಿವಾಸ ಕೆ.ಜಿ.
ಬಾಲಸುಬ್ರಮಣಿ ಎಸ್.
ಗೋಪಾಲಕೃಷ್ಣ ಆರ್.
ಸುಧಾಮ ಸಿ. ಶಾಸ್ತ್ರಿ

## ಅನ್ನ ಸಂತರ್ಪಣೆಗೆ ದೇಣಿಗೆ ನೀಡಿದ ಸದಸ್ಯರು

ನಾಗರತ್ನಮ್ಮ ಡಿ.ಸಿ.
ರವಿ ಪ್ರಕಾಶ್ ಎಸ್.
ಗೋವಿಂದ ಪ್ರಸಾದ್ ಬಿ.ಎನ್.
ಪದ್ಮನಾಭನ್
ಸತ್ಯಪ್ರಸಾದ್ ಎಸ್.ಆರ್.
ಸೂರ್ಯನಾರಾಯಣ ಬಿ.ಎಸ್.
ವೆಂಕಟ ಸುಬ್ಬರಾವ್ ಆರ್.ಎನ್.
ಉಮಾ ಎನ್. ಗೋವಿಂದ್
ಸರೋಜಾ ಕೆ.ಎಲ್.
ಶಾಂತಲಕ್ಷ್ಮಿ ವಿ.

## ವಿದ್ಯಾನಿಧಿಗೆ ದೇಣಿಗೆ ನೀಡಿದ ಸದಸ್ಯರು

ರವಿಕುಮಾರ್ ಎಸ್.
ಛಾಯಪತಿ ವಿ.
ಸರೋಜ ಕೆ.ಎಲ್.
ಸೂರ್ಯನಾರಾಯಣ ಬಿ.ಎಸ್.
ಧಾತ್ರಿ ಆರ್. ಪ್ರಸಾದ್
ರಾಹುಲ್ ಶ್ರೀನಿವಾಸ
ಶೇಖರ್ ಕೆ.ಸಿ.
ಇಂದಿರಾ ವಾಸುದೇವ್
ರಮಾ ಸುಬ್ಬರಾವ್
ತಾರಾ ರವೀಂದ್ರ
ರೂಪ ವಿಶ್ವೇಶ್
ಲತಾ ಎಸ್.ಆರ್.
ಬದರಿನಾರಾಯಣ ಎಚ್.ಆರ್.
ಸುಬ್ರಮಣ್ಯ ಎಸ್.ಜಿ.
ನರಸಿಂಹ ವಿ.
ರಮೇಶ್ ಆರ್.ಎಸ್.
ಅಟ್ಟೂರು ರಾಮಕೃಷ್ಣ ಶರ್ಮ
ರಾಜಲಕ್ಷ್ಮಿ ಆರ್.

# ಮನ ತಿದ್ದಿದ ದೇವರ ನುಡಿ

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ದಂಪತಿಗಳಿಗೆ ಆರು ಜನ ಹೆಣ್ಣುಮಕ್ಕಳು. ಅಧಿಕಾರದಲ್ಲಿದ್ದಾಗಲೇ ಎಲ್ಲಾ ಮಕ್ಕಳ ಮದುವೆ ಮಾಡಿ ಮುಗಿಸಿದ್ದರು. ಪ್ರಸ್ತುತ ಘಟನೆ ನಡೆದಿದ್ದು ಅವರ ಆರನೇ ಮಗಳ ಮದುವೆ ಸಂದರ್ಭದಲ್ಲಿ. ಮದುವೆಯೇನೋ ಚೆನ್ನಾಗಿ ಆಯಿತು. ಮಗಳನ್ನು ಗಂಡನ ಮನೆಗೆ ಕಳುಹಿಸುವ ಸಂದರ್ಭ. ಆ ಹೊತ್ತಿಗೆ ತುಂಬಾ ಖರ್ಚಾಗಿ ಮಾಸ್ತಿಯವರ ಆರ್ಥಿಕ ಸ್ಥಿತಿ ಸ್ವಲ್ಪ ನಾಜೂಕಾಗಿತ್ತು.

ಅದಕ್ಕೆ ತಮ್ಮ ಪತ್ನಿ ಮತ್ತು ತಾಯಿಯನ್ನು ಕರೆದು ಹೇಳಿದರು. ಮದುವೆಯ ಸಂಭ್ರಮಕ್ಕೇನೂ ಕಡಿಮೆಯಾಗಲಿಲ್ಲ, ಆದರೆ ಮುಂದಿನ ಕಾರ್ಯಕ್ರಮಕ್ಕೆ ಯಾವುದು ಅವಶ್ಯಕವೋ ಅದನ್ನು ಮಾತ್ರ ಮಾಡಿ, ದುಂದು ವೆಚ್ಚ ಮಾಡುವುದು ಬೇಡ. ಇಷ್ಟು ಎಚ್ಚರಿಕೆ ನೀಡಿ ತಮ್ಮ ಪ್ರವಾಸಕ್ಕೆ ಹೋದರು. ಅವರು ಮರಳಿ ಬರುವುದರಲ್ಲಿ ತಯಾರಿಗಳು ತುಂಬಾ ಅದ್ದೂರಿಯಾಗಿತ್ತು. ಸಾಲ ಮಾಡುವಷ್ಟರ ಮಟ್ಟಿಗೆ ಖರ್ಚು ಹೆಚ್ಚಾಗಿತ್ತು. ಮಾಸ್ತಿಯವರಿಗೆ ರೇಗಿಹೋಯಿತು.

ಪತ್ನಿಯನ್ನು ಕರೆದು "ನಾನು ನಿನಗೆ ಏನು ಹೇಳಿದ್ದೆ, ನೀನು ಏನು ಮಾಡಿದೆ? ನೀನು ಮನುಷ್ಯಳೇ? ಮೃಗಕ್ಕೂ ನಿನಗೂ ಏನು ವ್ಯತ್ಯಾಸ" ಎಂದು ಅಬ್ಬರಿಸಿದರು. ಗಂಡನ ಈ ಅಪರೂಪದ ಕೋಪ ನೋಡಿ ಆಕೆ ಗಾಬರಿಯಾಗಿ ಮಾತನಾಡದೆ ನಿಂತುಬಿಟ್ಟರು. ಈ ಸಿಡಿಲನಂತಹ ಮಾತಿನ ಮಳೆ ಕೇಳಿ ತಾಯಿ ಹೊರಬಂದರು. "ಯಾಕೋ, ನೀನು ಆಕೆಯನ್ನು ಬೈಯ್ಯುತ್ತಿದ್ದೀ? ಆಕೆಯದೇನೂ ತಪ್ಪಿಲ್ಲ. ತೀರ್ಮಾನ ನಾನೇ ತೆಗೆದುಕೊಂಡಿದ್ದು. ಮಗುವನ್ನು ಹಾಗೆಯೇ ಗಂಡನ ಮನೆಗೆ ಕಳುಹಿಸುವುದಕ್ಕಾಗುತ್ತದೇನೋ? ನಿನ್ನ ಹೆಂಡತಿ ಬೇಡವೆಂದರೂ, ನಾನೇ ಹತ್ತು ಜನ ಸಂತೋಷಪಡುವಂತೆ ಆಗಲಿ ಎಂದು ತೀರ್ಮಾನ ಮಾಡಿ ಎಲ್ಲವನ್ನೂ ಸಂಪ್ರದಾಯದಂತೆಯೇ ಯೋಜಿಸಿದ್ದೇನೆ, ಸರಿ ತಾನೇ" ಎಂದರು. ಎರಡನೆ ಬಾರಿಗೆ ಸಿಟ್ಟು ಉಕ್ಕಿ ಬಂತು ಮಾಸ್ತಿಯವರಿಗೆ.

ಆ ಕೋಪದಲ್ಲಿ ತಾವು ನಿಂದಿಸುತ್ತಿರುವುದು ತಾಯಿ ಎಂಬುದನ್ನು ಮರೆತು, "ಗೊಡ್ಡು ಸಂಪ್ರದಾಯಕ್ಕೆ ಕಟ್ಟುಬಿದ್ದ ಒಡ್ಡ ಹೆಂಗಸು ನೀನು. ನನ್ನ ಕಷ್ಟದ ಬಗ್ಗೆ ಸ್ವಲ್ಪವಾದರೂ ಕರುಣೆ ಇದೆಯೇ, ಕಾಳಜಿ ಇದೆಯೇ? ನೀನು ತಾಯಿಯೇ" ಎಂದೆಲ್ಲಾ ಕೂಗಾಡಿ ತಮ್ಮ ಕೊಠಡಿಗೆ ಹೋಗಿ ಬಾಗಿಲು ಮುರಿದು ಹೋಗುವಂತೆ ರಪ್ಪೆಂದು ಬಡಿದು ಮುಚ್ಚಿಕೊಂಡರು.

ಮರುದಿನ ಎಂದಿನಂತೆ ಸ್ನಾನಮಾಡಿ ಮಡಿಯುಟ್ಟು ದೇವರ ಮನೆಗೆ ಹೋದರು. ಮನೆ ದೇವರನ್ನು ಸ್ಮರಿಸುತ್ತಾ, ಆ ಶ್ರೀನಿವಾಸನನ್ನು ಸ್ತುತಿಸುವ ಶ್ಲೋಕಗಳನ್ನು ಹೇಳತೊಡಗಿದರು. ನಂತರ ನಿತ್ಯದಂತೆ ರಾಮಾಯಣ ಪಾರಾಯಣ ಪ್ರಾರಂಭಿಸಿದರು. ಆಶ್ಚರ್ಯ! ದಿನವೂ ನಿರಾಯಾಸವಾಗಿ ಹೇಳುತ್ತಿದ್ದ ಶ್ಲೋಕಗಳು ಬಾಯಿಗೆ ಬರುತ್ತಿಲ್ಲ. ಪೀಠಿಕಾ ಶ್ಲೋಕಗಳು ನೆನಪಿಗೆ ಬರುತ್ತಿಲ್ಲ. ಸಾಲುಗಳೆಲ್ಲಾ ಮರೆತು ಹೋಗಿದೆ! ದಿಟ್ಟಿಸಿ ತಮ್ಮ ಆರಾಧ್ಯ ದೈವವಾದ ಶ್ರೀನಿವಾಸನ ಚಿತ್ರ ನೋಡಿದರು. ಅದು ಮಾತನಾಡಿದಂತೆ ತೋರಿತು. "ನಿನ್ನನ್ನು ಹೊತ್ತು, ಸಾಕಿ, ಸಲಹಿ, ದೊಡ್ಡವನನ್ನಾಗಿ ಮಾಡಿ, ನಿನ್ನನ್ನೂ ಒಬ್ಬ ಮನುಷ್ಯನನ್ನಾಗಿ ಮಾಡಿ, ಸಂತೋಷ ಪಟ್ಟು, ನಿನಗಾಗಿಯೇ ಬದುಕಿರುವ ನಿನ್ನ ಅಮ್ಮನ ವಿಷಯದಲ್ಲಿ ಎಂಥದೋ ಒಂದು ಸಣ್ಣ ವಿಷಯಕ್ಕೆ ಆ ಸೌಜನ್ಯವನ್ನು ಮರೆತು ಹಾಗೆ ಒರಟು ಮಾತನಾಡಿ ಸಣ್ಣವನಾದೆಯಲ್ಲ" ಎಂದಂತೆ ಭಾಸವಾಯಿತು. ತಕ್ಷಣ ಪುಸ್ತಕವನ್ನು ಕೆಳಗಿಟ್ಟು ಅಡಿಗೆ ಮನೆಗೆ ಹೋದರು.

ಅಮ್ಮ ಒಲೆಯ ಮುಂದೆ ಕುಳಿತಿದ್ದರು. ಇವರೂ ಪಕ್ಕದಲ್ಲಿ ಕುಳಿತು "ಅಮ್ಮೋ" ಎಂದರು. ಅಮ್ಮ ತಿರುಗಿ ನೋಡಿದರು. ಬಹುಶಃ ಅತ್ತು, ಅತ್ತು ಅವರ ಕಣ್ಣು ಊದಿಕೊಂಡಿದ್ದವು. ಆಕೆಯನ್ನು ನೋಡಿ ಕರುಳು ಕಿವಿಚಿದಂತಾಯಿತು. "ಅಮ್ಮೋ" ನಿನ್ನ ಮೇಲೆ ಅತ್ಯಂತ ಸಣ್ಣ ಕಾರಣಕ್ಕೆ ರೇಗಾಡಿದೆ. ಹಣ ಸಾಲದಲ್ಲಾ ಎಂಬ ಸಂಕಟದಿಂದ ಹೀಗೆಲ್ಲಾ ಮಾತನಾಡಿದೆ. ಕೋಪದಲ್ಲಿ ಏನೇನೋ ಅಂದುಬಿಟ್ಟೆ. ಈಗ ಪಾರಾಯಣಕ್ಕೆ ಕುಳಿತರೆ ಕ್ಷುಲ್ಲಕ ಕಾರಣಕ್ಕೆ ಹೆತ್ತ ಅಮ್ಮನನ್ನೇ ಬೈದು, ಕಣ್ಣೀರು ತರಿಸಿದೆ. ನೀನು ಈಗ ನಸುಗುನ್ನಿಯಂತೆ ನನ್ನೆದುರು ಕುಳಿತು ಪಾರಾಯಣ ಮಾಡುತ್ತಿರುವೆಯೇನೋ ಪಾಪಿ, ಎದ್ದು ತೊಲಗು ಎಂದು ದೇವರು ಹೇಳಿದಂತಾಯಿತು. ನಾನು ಮಾಡಿದ್ದು ಅಪರಾಧ, ಕ್ಷಮಿಸು ಎಂದು ಕಾಲು ಹಿಡಿದು ಅತ್ತರು.

ಆಗ ಅವರ ಅಮ್ಮ, "ಛೀ, ನನ್ನಪ್ಪ, ನೀನೇ ಸಂಕಟಪಡುತ್ತಿರುವೆಯಷ್ಟೇ. ನೀನು ನನಗೆ ಬೈಯ್ಯಲಾರದೆ ಇನ್ನಾರು ಮಾತನಾಡಬೇಕೋ. ನೀನೇನೆಂದೆಯೋ ಯಾವುದೂ ನೆನಪಿಲ್ಲ. ಎಲ್ಲ ಆಗಲೇ ಮರೆತುಬಿಟ್ಟೆ. ಹೋಗು ಶುದ್ಧ ಮನಸ್ಸಿನಿಂದ ಪಾರಾಯಣ ಮಾಡು" ಎಂದು ತಲೆ ಸವರಿದರು.



ಮರಳಿ ಬಂದು ದೇವರ ಮುಂದೆ ಕುಳಿತಾಗ ಯಾವ ಶ್ಲೋಕಗಳನ್ನು ಮರೆಯಲಿಲ್ಲ. ಹೃದಯ ಹಗುರಾಯಿತು. ಇಂಥಹ ಘಟನೆಗಳು ನಮ್ಮ ಮನಸ್ಸುಗಳನ್ನು ಹದಗೊಳಿಸುತ್ತದೆ. ನಮ್ಮಲ್ಲಿ ಆಗಾಗ ಉಕ್ಕಿ ಬರುವ ಅಹಂಕಾರ, ಕ್ರೌರ್ಯದ ಮಾತುಗಳಿಗೆ, ಕೃತಿಗಳಿಗೆ ತಡೆಯೊಡ್ಡುತ್ತವೆ.

ಶ್ರೀ ಎಸ್. ಶ್ರೀನಿವಾಸಯ್ಯ
7899318098

## ಅಮೆರಿಕದಲ್ಲಿ ನಾನು ಕಂಡ ದೇವಾಲಯಗಳು – 1

### ನ್ಯೂಯಾರ್ಕ್ ಗಣೇಶ ದೇವಾಲಯ / ಶ್ರೀ ಮಹಾವಲ್ಲಭ ಗಣಪತಿ ದೇವಸ್ಥಾನಮ್




ಅಮೇರಿಕದ ಸುಪ್ರಸಿದ್ಧ ನಗರ ನ್ಯೂಯಾರ್ಕ್. ಇಲ್ಲಿನ ಕ್ವೀನ್ಸ್ ಎಂಬ ವಿಭಾಗದ ಫ್ಲಶಿಂಗ್ ಬಡಾವಣೆಯಲ್ಲಿ ನ್ಯೂಯಾರ್ಕ್ ಗಣೇಶ ಎಂದೇ ಪ್ರಸಿದ್ಧವಾದ ಒಂದು ಗಣೇಶ ದೇವಾಲಯವಿದೆ. 40 ವರ್ಷಗಳ ಹಿಂದೆಯೇ ಪ್ರಾರಂಭವಾದ ದೇಗುಲ ಇದಾಗಿದೆ. ಜನವರಿ 26, 1970 ರಂದು ನ್ಯೂಯಾರ್ಕ್ ರಾಜ್ಯದ ನಿಯಮಗಳ ಅಡಿಯಲ್ಲಿ "ದ ಹಿಂದು ಟೆಂಪಲ್ ಸೊಸೈಟಿ ಆಫ್ ನಾರ್ತ್ ಅಮೇರಿಕ" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ತಕ್ಷಣವೇ ಒಂದು ಚರ್ಚ್‌ನಿಂದ ಈಗ ದೇಗುಲವಿರುವ ಸ್ಥಳವನ್ನು ಕೊಳ್ಳಲಾಯಿತು. ಒಂದು ಸಣ್ಣ ಮನೆಯಂತಹ ಕಟ್ಟಡದಲ್ಲಿ ಪೂಜೆ ನಡೆಯುತ್ತಿದ್ದು ವಾರಾಂತ್ಯಗಳಲ್ಲಿ ಕೆಲವು ಸ್ವಯಂಸೇವಕ ಪೂಜಾರಿಗಳು ಬಂದು ಸೇವೆ ಸಲ್ಲಿಸುತ್ತಿದ್ದರು.

1977ರಲ್ಲಿ ಆಗಮಶಾಸ್ತ್ರದ ನಿಯಮದಂತೆ ಕಟ್ಟಡದ ನಿರ್ಮಾಣವಾಗಿ ಅದೇ ವರ್ಷ ಜೂಲೈ 4ರಂದು ದೇವರ ಪ್ರತಿಷ್ಠಾಪನೆ ನೆರವೇರಿತು. ಭಾರತದಿಂದ ಆಮದು ಮಾಡಿಕೊಂಡ ಗ್ರಾನೈಟ್ ಶಿಲೆಗಳನ್ನು ಬಳಸಿ ಕಟ್ಟಿರುವ ಸುಂದರ ದೇವಾಲಯ.ಉತ್ತರ ಅಮೆರಿಕದಲ್ಲಿಯೇ ಮೊಟ್ಟಮೊದಲ ಅಧಿಕೃತ ದೇವಾಲಯವಿದು ಎಂದರೆ ತಪ್ಪಿಲ್ಲ. ಅದು ಚಿಕ್ಕ ಹಾಗೂ ಸರಳ ದೇವಾಲಯವಾಗಿದ್ದದ್ದು ಇಂದು ತನ್ನ ಸಾಧನೆ, ಕೊಡುಗೆ ಹಾಗೂ ಸಮುದಾಯ ಕಾರ್ಯಕ್ಕಾಗಿ ಹೆಸರು ಪಡೆದಿದೆ. ಶ್ರೀ ಮಹಾವಲ್ಲಭ ಗಣಪತಿ ದೇವಸ್ಥಾನ ಎಂದೂ ಸಹ ಕರೆಯಲ್ಪಡುವ ಇದು ಐತಿಹಾಸಿಕವಾಗಿಯೂ ಮತ್ತು ವಾಸ್ತುಶಿಲ್ಪ ದೃಷ್ಟಿಯಲ್ಲಿಯೂ ವಿಶೇಷವಾಗಿದೆ. ಇತ್ತೀಚಿಗೆ ಇದನ್ನು ಎರಡರಷ್ಟು ವಿಸ್ತರಿಸಿ ಒಂದು ಹಿಂದೂ ದೇವಾಲಯ ಸಮುದಾಯ ಕೇಂದ್ರವನ್ನು ನಿರ್ಮಿಸಲಾಗಿದೆ. ಒಂದು ಅಂದವಾದ ಸಭಾಂಗಣ, ಮದುವೆ ಹಾಲ್, ಸಮ್ಮೇಳನ ಕೊಠಡಿ ಎಲ್ಲವೂ ಇದರಲ್ಲಿವೆ.

ದೇಗುಲದೊಳಗೆ ಗಣಪತಿ ಮಾತ್ರವಲ್ಲದೆ ಶಿವ, ಧನ್ವಂತರಿ, ರಾಮಸೀತಾಲಕ್ಷ್ಮಣ, ಸತ್ಯನಾರಾಯಣ, ಸುಬ್ರಹ್ಮಣ್ಯ, ಹನುಮಂತ, ವೆಂಕಟೇಶ್ವರ, ರಾಧಾಕೃಷ್ಣ, ಅಯ್ಯಪ್ಪ, ಲಕ್ಷ್ಮಿ, ಸರಸ್ವತಿ, ಪಾರ್ವತಿ, ಗಾಯತ್ರಿ ಇನ್ನೂ ಮುಂತಾದ ದೇವಾನುದೇವತೆಗಳು ಇಲ್ಲಿ ಭಕ್ತಿಭಾವವನ್ನು ಮೂಡಿಸುತ್ತಾ ರಾರಾಜಿಸುತ್ತಿದ್ದಾರೆ. ಈ ದೇವಾಲಯದ ಈಮೇಲ್ ಪಟ್ಟಿಯಲ್ಲಿ 20000 ಭಕ್ತರು ಇರುವರು. ಇವರಷ್ಟೇ ಅಲ್ಲದೆ ಸಾವಿರಾರು ಭಕ್ತರು ಆಗಮಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ. ಧರ್ಮ, ಆಧ್ಯಾತ್ಮ, ಸಂಸ್ಕೃತಿ ಹಾಗು ಕಲಾ ವಿಭಾಗಗಳಲ್ಲಿ ಭಕ್ತರು ಹಾಗೂ ಅವರ ಕುಟುಂಬದವರಿಗೆ ಔಪಚಾರಿಕ ಬೋಧನೆ ನೀಡುವ ಗುರಿಯನ್ನೂ ಈ ಸಂಸ್ಥೆ ಹೊಂದಿದೆ. ಇದಕ್ಕಾಗಿಯೇ ಗಣೇಶ ಪಾಠಶಾಲೆ ಇದೆ. ವಾರಾಂತ್ಯದಲ್ಲಿ ಮಕ್ಕಳು ಹಾಗು ತಾಯಿ ತಂದೆಯರಿಗೆ ತರಗತಿಗಳು ನಡೆಯುತ್ತವೆ. 5 ರಿಂದ 7 ವರ್ಷದ ಮಕ್ಕಳು ಇಲ್ಲಿ ದಾಖಲಾಗಿ ಹಿಂದು ಧರ್ಮ, ಭಜನೆ, ಶ್ಲೋಕ, ಸಂಸ್ಕೃತ, ಹಿಂದಿ, ಕನ್ನಡ, ತಮಿಳು, ತೆಲುಗು, ವಿಜ್ಞಾನ, ಗಣಿತ, ಕಂಪ್ಯೂಟರ್ ಎಲ್ಲವನ್ನೂ ಕಲಿಯುತ್ತಾರೆ. ವೇದಪಠಣ, ದಿವ್ಯಪ್ರಬಂಧ ತರಗತಿಗಳು ಪ್ರತಿಸಂಜೆ ನಡೆಯುತ್ತವೆ. ಭಾನುವಾರದಂದು ಯೋಗ, ಪ್ರಾಣಾಯಾಮ, ಧ್ಯಾನ ತರಗತಿಗಳಿರುತ್ತವೆ. ಇವಲ್ಲದೆ ಭರತನಾಟ್ಯ, ಕಥಕ್ ನೃತ್ಯವಲ್ಲದೆ ಸಂಗೀತ ತರಗತಿಗಳೂ ನಡೆಯುತ್ತವೆ.

ದೇವಾಲಯದ ಪ್ರಾಂಗಣದ ಕೆಳಗೆ ಒಂದು ಕ್ಯಾಂಟೀನ್ ಸಹ ಇದ್ದು ಶುಚಿರುಚಿಯಾದ ಊಟ, ತಿಂಡಿ ಹಾಗೂ ಪಾನೀಯಗಳು ಕಡಿಮೆದರದಲ್ಲಿ ಮಾರಲ್ಪಡುತ್ತವೆ. 1993ರಲ್ಲಿ ದೇವತೆಗಳ ನೈವೇದ್ಯಕ್ಕಾಗಿ ಪ್ರಾರಂಭವಾಗಿ, ಇಂದು ಭಕ್ತಾದಿಗಳಿಗೂ ನೆರವಾಗುತ್ತಿದೆ. ಇಡ್ಲಿ, ದೋಸೆ, ಉಪ್ಪಿಟ್ಟು, ಚಟ್ನಿ, ಸಾಂಬಾರ್, ಪೊಂಗಲ್, ದಕ್ಷಿಣ ಭಾರತೀಯ ಊಟ ಎಲ್ಲವೂ ಇಲ್ಲಿ ಲಭ್ಯ. ನಾನೂ ಇದರ ಸವಿ ಸವಿದೆ.




ಬಿ.ಇ. ಸೀತಾಲಕ್ಷ್ಮಿ
9980196470

## ಮನೋರಂಜನೆಗಾಗಿ ಗಣಿತ




**ಪ್ರಶ್ನೆಗಳು**

(1) ಪುಟ್ಟಿಯು ತನ್ನ ಬಳಿ ಇರುವ ರಿಬ್ಬನ್ನಿನಲ್ಲಿ ಅರ್ಧದಷ್ಟರ ಕಾಲುಭಾಗವನ್ನು ಮಾಲಾಳಿಗೆ ಮತ್ತು ಕಾಲುಭಾಗದ ಅರ್ಧದಷ್ಟನ್ನು ಶೀಲಾಳಿಗೆ ಕೊಟ್ಟ ನಂತರ ಅವಳ ಬಳಿ 24 ರಿಬ್ಬನ್ನುಗಳು +ಉಳಿದರೆ, ಮೊದಲಿಗೆ ಪುಟ್ಟಿಯು ಬಳಿ ಇದ್ದ ರಿಬ್ಬನ್ನುಗಳು ಎಷ್ಟು?

(2) ಒಂದು ನೀರಿನ ಟ್ಯಾಂಕನ್ನು ತುಂಬಲು ಅದಕ್ಕಿರುವ ನಲ್ಲಿಗೆ 15 ಗಂಟೆಗಳು ಬೇಕು. ಆ ಟ್ಯಾಂಕು ಬೇಗ ತುಂಬಲೆಂದು ಅದಕ್ಕೆ ಒಂದು ಹೊಸ ನಲ್ಲಿಯನ್ನು ಹಾಕಿಸುತ್ತಾರೆ. ಎರಡೂ ನಲ್ಲಿಗಳನ್ನು ಒಟ್ಟಿಗೆ ತಿರುಗಿಸಿದರೆ ಟ್ಯಾಂಕು 10 ಗಂಟೆಯಲ್ಲಿ ತುಂಬುತ್ತದೆ. ಹಾಗಿದ್ದರೆ, ಕೇವಲ ಹೊಸ ನಲ್ಲಿಯನ್ನು ತಿರುಗಿಸಿದರೆ ಟ್ಯಾಂಕು ತುಂಬಲು ಎಷ್ಟು ಸಮಯ ಹಿಡಿಯುತ್ತದೆ?

(3) ರಾಮಣ್ಣನು ತಾನು ರೂ.80,000ಕ್ಕೆ ಕೊಂಡಿದ್ದ ಹಸುವನ್ನು ಭೀಮಣ್ಣನಿಗೆ 20% ಲಾಭಕ್ಕೆ ಮಾರಿದನು. ಕೆಲವು ದಿನಗಳ ನಂತರ ಆ ಹಸುವನ್ನು ಭೀಮಣ್ಣನು 20% ನಷ್ಟಕ್ಕೆ ರಾಮಣ್ಣನಿಗೇ ಮಾರಿದನು. ಹಾಗಿದ್ದರೆ, ಈ ವ್ಯವಹಾರದಿಂದ ರಾಮಣ್ಣನಿಗೆ ಉಂಟಾದ ಲಾಭ ಅಥವಾ ನಷ್ಟ ಎಷ್ಟು ರೂಪಾಯಿಗಳು?

(4) ಮುಂದಿನ ಎರಡು ಸಂಖ್ಯೆಗಳನ್ನು ತುಂಬಿರಿ:
0, 3, 8, 15, 24, ______ , ______

(5) ಎರಡು ಸಂಖ್ಯೆಗಳ ವ್ಯತ್ಯಾಸ 6 ಆಗಿದ್ದು ಅವನ್ನು ಗುಣಿಸಿದಾಗ ಬರುವ ಉತ್ತರ 1080 ಆಗಿದ್ದರೆ, ಆ ಎರಡು ಧನಾತ್ಮಕ ಸಂಖ್ಯೆಗಳು (ಪಾಸಿಟಿವ್ ಸಂಖ್ಯೆಗಳು) ಯಾವುವು?

ನಿಮ್ಮ ಉತ್ತರಗಳಲ್ಲಿ:
5 ಸರಿ ಇದ್ದರೆ – ಅತ್ಯುತ್ತಮ
3–4 ಸರಿ ಇದ್ದರೆ – ಉತ್ತಮ
1–2 ಸರಿ ಇದ್ದರೆ – ಮಧ್ಯಮ

ಒಂದೂ ಸರಿ ಇಲ್ಲದಿದ್ದರೆ ... ಹೆಚ್ಚಿನ ಅಭ್ಯಾಸದ ಅಗತ್ಯವಿದೆ.

ಉತ್ತರಗಳು:
(1) 32 ರಿಬ್ಬನ್ನುಗಳು
(2) 30 ಗಂಟೆಗಳು
(3) ರೂ.3,200 ಲಾಭ
(4) 35, 48
(5) 30 ಮತ್ತು 36



ಬಿ.ಈ. ಗೋವಿಂದ್
91677 62948

### ಹೊಸ ಸದಸ್ಯರು








ದಿವ್ಯಾ ವಿ. ರವಿಶಂಕರ್
ಎಸ್. ರವಿ ಪ್ರಕಾಶ್
ವಿ.ಶಾಂತಲಕ್ಷ್ಮೀ
ಎಂ.ಕೆ.ರವಿ ಪ್ರಕಾಶ್
ಎಂ.ಎಲ್.ಶಾರದಾ
ಕೆ.ಎಸ್.ಅಶ್ವತ್ಥನಾರಾಯಣರಾವ್

### ಸದಸ್ಯರಿಂದ ಪೋಷಕರು

ಆರ್.ರಾಜಲಕ್ಷ್ಮಿ


**ಸಂಘವು ಹೊಸ ಸದಸ್ಯರನ್ನು/ಪೋಷಕರನ್ನು ಸ್ವಾಗತಿಸುತ್ತದೆ.**

## ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ

| | | | | |
|---|---|---|---|---|
|  | **ಆರ್.ವಿ.ಗೋಪಿನಾಥ** | 91 | 5.6.2022 | ಹಿರಿಯ ಸದಸ್ಯೆ<br>ಶ್ರೀಮತಿ ಭ್ರಮರಾಂಬರವರ ಪತಿ |
|  | **ಎಸ್.ಜಿ.ವೆಂಕಟೇಶ್ ಮೂರ್ತಿ** | 72 | 28.6.2022 | ದಿ॥ ಸೋಮತ್ತಳ್ಳಿ ಗೋಪಾಲಯ್ಯನವರ ಪುತ್ರ<br>ಹಾಗೂ ಶ್ರೀ ಎಸ್.ದಿವಾಕರ್‌ರವರ ಸೋದರ |
|  | **ಪದ್ಮಾವತಿ (ದುರ್ಗಮ್ಮ)** | 73 | 4.7.2022 | ಪೋಷಕ ಶ್ರೀ ಆರ್.ವೆಂಕಟೇಶ್<br>ಪ್ರಸಾದ್‌ರವರ ತಾಯಿ,<br>ದಿ॥ ರಾಮೇಶ್ವರಯ್ಯನವರ ಪತ್ನಿ ಹಾಗೂ<br>ಸಂಘದ ಕಾರ್ಯದರ್ಶಿ<br>ಶ್ರೀ ಎಸ್.ಸಿ.ಶ್ರೀನಿವಾಸರವರ ಚಿಕ್ಕಮ್ಮ |
|  | **ವಿಜಯಲಕ್ಷ್ಮಿ** | 79 | 13.7.2022 | ಸಂಘದ ಸದಸ್ಯರಾದ<br>ಶ್ರೀ ಎ.ಪಿ. ಶೇಷಾದ್ರಿ,<br>ಶ್ರೀ ಎ.ಪಿ. ವೆಂಕಟೇಶ್ ಮತ್ತು<br>ಶ್ರೀ ಎ.ಪಿ. ನಾಗಭೂಷಣರವರ ತಾಯಿ |
|  | **ಶಾಂತಲಕ್ಷ್ಮಿ** | 82 | 13.7.2022 | ಸದಸ್ಯರಾದ ಶ್ರೀ ಜಿ.ಎಲ್.ಸತೀಶ್ ಮತ್ತು<br>ಶ್ರೀಮತಿ ಜಿ.ಎಲ್.ಸವಿತಾರವರ ತಾಯಿ<br>ಹಾಗೂ ಸಣ್ಣೆ ರಾಮಯ್ಯನವರ ಮಗಳು |
|  | **ಮಂಜುಳ** | 69 | 19.7.2022 | ಕಾರ್ಯಕಾರಿ ಸಮಿತಿ ಸದಸ್ಯ<br>ಶ್ರೀ ಕೆ.ಬಿ.ಎಸ್.ಶರ್ಮ, ಹಿಂದಿನ<br>ಉಪಾಧ್ಯಕ್ಷ ಶ್ರೀ ಕೆ.ಬಿ. ಮುರಳಿ ಹಾಗೂ<br>ಸದಸ್ಯ ಶ್ರೀ ಕೆ.ಬಿ.ಸುರೇಶ್‌ರವರ ಸೋದರಿ. |
|  | **ಶಾರದಮ್ಮ** | 87 | 5.8.2022 | ದಿ॥ ಸಭಾಪತಿ ಐಯ್ಯರ್‌ರವರ ಪತ್ನಿ<br>ಹಾಗೂ<br>ಪೋಷಕ ಎಸ್.ರವಿಕುಮಾರ್‌ರವರ ಚಿಕ್ಕಮ್ಮ |
|  | **ಕೆ.ಆರ್.ಕೃಷ್ಣಮೂರ್ತಿ** | 73 | 9.8.2022 | ಸದಸ್ಯೆ ಮೀರಾ ಕೃಷ್ಣಮೂರ್ತಿರವರ ಪತಿ |
|  | **ಕೆ.ಆರ್.ಗಿಣಿ** | 85 | 10.8.2022 | ಹಿರಿಯ ಸದಸ್ಯ ಹಾಗೂ<br>ಎಸ್. ರಾಮಯ್ಯನವರ ಪುತ್ರ |
|  | **ನಡವತ್ತಿ ಇಂದುಮೌಳಿ** | 61 | 21.8.2022 | ಸದಸ್ಯೆ ಟಿ.ಸಿ. ಮೀರಾರವರ ಪತಿ |

# ನೆನಪಿನಂಗಳ

## ರಾಜಾಪುರ ಕುಟುಂಬ



**ಜೂನ್ 1983 – ಗೋಪಿನಾಥ್‌ರವರ ನೂತನ ಗೃಹಪ್ರವೇಶದ ಸಂದರ್ಭ**

**ವಿಜಯಲಕ್ಷ್ಮೀ, ದಾಕ್ಷಾಯಣಿ, ಸುಬ್ಬಮ್ಮ, ಸುವರ್ಣ, ಭ್ರಮರಾಂಬ**

**ಲಕ್ಷ್ಮೀಕಾಂತ್, ಶಿವಸ್ವಾಮಿ, ರಾಜಗೋಪಾಲ್, ಪದ್ಮನಾಭ, ಗೋಪಿನಾಥ್, ಕೃಷ್ಣಸ್ವಾಮಿ**

# ಶಂಕರ ಜಯಂತಿ


ಛಾಯಾಚಿತ್ರಗಳು : ಕೆ.ಸಿ. ನಟರಾಜನ್/ಆರ್.ಎ. ಶ್ಯಾಮಸುಂದರ್
















## ಸುದ್ದಿ ಚಿತ್ರ





ಬೃಹಚ್ಚರಣ ಪಂಗಡದ ದಿ॥ ಸಣ್ಣೆ ಹನುಮಂತರಾವ್ ಅವರ ಪರಿವಾರದ ಎಪ್ಪತ್ತು ಸದಸ್ಯರು ದೇವನಹಳ್ಳಿ ಬಳಿಯ ಆವತಿ ಗ್ರಾಮದ, 800 ವರ್ಷಗಳಷ್ಟು ಪುರಾತನವಾದ ಹಾಗೂ ಈ ಪರಿವಾರದ ಮನೆದೇವರಾದ ಶ್ರೀ ತಿಮ್ಮರಾಯಸ್ವಾಮಿಯವರ ದೇವಸ್ಥಾನಕ್ಕೆ ಉತ್ಸವ ಮೂರ್ತಿಗಾಗಿ ರಥವನ್ನು ಮಾಡಿಸಿ ಶ್ರದ್ಧಾಭಕ್ತಿಗಳಿಂದ ಸಮರ್ಪಿಸಿರುತ್ತಾರೆ. ಕಳೆದ ಜುಲೈ ತಿಂಗಳು ಈ ಪುಣ್ಯ ಕ್ಷೇತ್ರದಲ್ಲಿ ಆಚರಿಸಲ್ಪಟ್ಟ ಕುಂಬಾಭಿಷೇಕ ಹಾಗೂ ಪ್ರಾಕಾರೋತ್ಸವದ ಸಂದರ್ಭದಲ್ಲಿ ಈ ರಥದ ಉದ್ಘಾಟನೆಯು ನೆರವೇರಿರುತ್ತದೆ.

## ಅಭಿನಂದನೆಗಳು



ಹಿರಿಯ ಮೃದಂಗ ಕಲಾವಿದರೂ ನ್ಯಾಯವಾದಿಗಳೂ ಹಾಗೂ ನಮ್ಮ ಸಂಘದ ಸದಸ್ಯರೂ ಆಗಿರುವ ಶ್ರೀ ಸುದರ್ಶನ್ ಸುಬ್ಬರಾವ್ ಅವರ ಲೇಖನಿಯಿಂದ ಮೂಡಿಬಂದಿರುವ ಮೂರು ಕೃತಿಗಳು ( ಸತ್ಯದ ಸೆಲೆ – ಗಾಂಧೀಜಿ ಅವರ ಬಗೆಗಿನ ಆಯ್ದ ಲೇಖನಗಳು, ಬರಹದ ಭಾಷ್ಯ – ಚಿಂತನಯೋಗ್ಯ ಲೇಖನಗಳು ಮತ್ತು ಶುದ್ಧ ಸೀಮಂತಿನಿ –ಅಭಿನಯಯೋಗ್ಯ ನಾಟಕಗಳ ಗುಚ್ಛ) ಆಗಸ್ಟ್ ತಿಂಗಳ ಭಾನುವಾರ 14ರಂದು ಮಂಡ್ಯ ಪಟ್ಟಣದಲ್ಲಿ ಲೋಕಾರ್ಪಣೆಗೊಂಡವು. ಶ್ರೀಯುತರ ತಂದೆ ದಿವಂಗತ ಡಾ॥ ಬಿ. ಸುಬ್ಬರಾವ್ ಅವರ ಸ್ಮರಣಾರ್ಥ ಸ್ಥಾಪಿತವಾಗಿರುವ ಸಾಂಸ್ಕೃತಿಕ ಟ್ರಸ್ಟ್‌ನ ವತಿಯಿಂದ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ ಈ ಸಮಾರಂಭವು ನೆರವೇರಿತು. ಸಂಘದ ಶುಭ ಹಾರೈಕೆ

******






ಸಂಘದ ಹಿರಿಯ ಸದಸ್ಯ ಶ್ರೀ ಬಿ.ವಿ. ಶೇಷಾದ್ರಿ ಅವರು ತಮ್ಮ ಸೋದರಿ ದಿ॥ ಬಿ.ವಿ. ಪದ್ಮಾ ಅವರ ಪುಣ್ಯಸ್ಮರಣೆಯಲ್ಲಿ ಶಂಕರ ಕ್ಯಾನ್ಸರ್ ಆಸ್ಪತ್ರೆಗೆ ನೀಡಿದ್ದ 12 ಲಕ್ಷ ರೂ. ಗಳಲ್ಲಿ ಆಸ್ಪತ್ರೆಯು ಒಂದು ಸುಸಜ್ಜಿತ ವಾರ್ಡ್ ಅನ್ನು ನಿರ್ಮಿಸಿದೆ. 14/08/2022 ರಂದು ಈ ವಾರ್ಡ್‌ನ ಉದ್ಘಾಟನೆಯಾಗಿರುತ್ತದೆ.

ಶ್ರೀ ಶೇಷಾದ್ರಿರವರ ಜೊತೆಯಲ್ಲಿ ನಮ್ಮ ಸಂಘದ ಮತ್ತೋರ್ವ ಹಿರಿಯ ಸದಸ್ಯರು ಶ್ರೀ ಬಿ.ಎಸ್. ಸೂರ್ಯನಾರಾಯಣ ಅವರನ್ನು ಶಂಕರ ಆಸ್ಪತ್ರೆಯು ಕ್ರಮವಾಗಿ ಪ್ಲಾಟಿನಂ ಮತ್ತು ಗೋಲ್ಡ್ ಮಟ್ಟದ ದಾನಿಗಳೆಂದು ಪರಿಗಣಿಸಿ ಗೌರವಿಸಿದೆ.

ಈ ಹಿರಿಯ ಚೇತನರಿಬ್ಬರನ್ನೂ ಸಂಘವು ಗೌರವಪೂರ್ವಕವಾಗಿ ಅಭಿನಂದಿಸುತ್ತಾ ಇವರುಗಳಿಗೆ ಭಗವಂತನು ಹಲವಾರು ವರ್ಷಗಳ ಅರೋಗ್ಯಪೂರ್ಣ, ಕ್ರಿಯಾಶೀಲ ಜೀವನವನ್ನು ಕರುಣಿಸಲೆಂದು ಪ್ರಾರ್ಥಿಸುತ್ತದೆ.

******



ಸಂಘದ ಸದಸ್ಯೆ ಡಾ॥ ರಮಾದೇವಿ ಅವರು (ನಿಕಟಪೂರ್ವ ಅಧ್ಯಕ್ಷರು ಶ್ರೀ ಸೋಮಸುಂದರ ಅವರ ಪುತ್ರಿಯವರು) ನಗರದ ಆಕ್ಸ್ ಫರ್ಡ್ ಕಾಲೇಜ್‌ನ 2019–2022 ಶೈಕ್ಷಣಿಕ ವರ್ಷದಲ್ಲಿ **Dental Surgery - Orthodontics** (ಸ್ನಾತಕೋತ್ತರ) ವಿಷಯವನ್ನು ಅಭ್ಯಸಿಸಿ ಉತ್ತಮ ದರ್ಜೆಯಲ್ಲಿ ಯಶಸ್ವಿಯಾಗಿ **M.D.S. (Orthodontics)** ಪದವಿ ಗಳಿಸಿದ್ದಾರೆ.

ಸಂಘವು ಡಾ॥ ರಮಾದೇವಿ ಅವರನ್ನು ಅಭಿನಂದಿಸುತ್ತಾ ಅವರಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತದೆ.

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

**Published by Sri B. Subramanyam, President, 'BRUHACHARANA SANGHA', No. 27/1, Bull Temple Road, Basavanagudi, Bengaluru - 560 004.**
**Printed at Hamsanikethan Printers, No. 126, C.T. Bed, 6th Cross Rd, Banashankari Stage II, Banashankari, Bengaluru, Karnataka 560070**